# 7

# ದೇವರು ಹೇಗೆ ಹತಾಶೆಯ ಪ್ರಕರಣವನ್ನು ನಿವಾರಿಸಿದನು

## (1 ಅರಸು 19:1-21)

ಆತನ ಮಳೆಗಾಗಿ ಮಾಡಿದ ಪ್ರಾರ್ಥನೆ ಉತ್ತರಿಸಲ್ಪಟ್ಟ ಮೇಲೆ, ಎಲೀಯನು ರೋಮಾಂಚಿತನಾದನು. ಆತನು ದೇವರು ಬಾಳನ ಪ್ರವಾದಿಗಳ ಎದುರಿಸುವಿಕೆಯಲ್ಲಿ ಜಯವನ್ನು ಸಾಧಿಸಿದ್ದನು. ಜನರು "ಯೆಹೋವನೇ ಕರ್ತನು" ಎಂದು ಕೂಗುತ್ತಿರುವುದನ್ನು ಆತನು ಕೇಳಿದನು. ಆತನು ಅಂತಿಮವಾಗಿ ಜಲಪ್ರಳಯದ ಪ್ರವಾಹವು ಬರವನ್ನು ಕೊನೆಗೊಳಿಸಿದುದನ್ನು ಕಂಡನು. 18 ನೇಯ ಅಧ್ಯಾಯದ ಅಂತ್ಯದಲ್ಲಿ ಎಲೀಯನು ಇಜ್ರೇಲಿನ ಬಾಗಿಲಿನಲ್ಲಿ ಆಹಾಬನು ಅರಮನೆಗೆ ಹೋಗುವುದನ್ನು ಕಾಯುತ್ತಾ ಕುಳಿತ್ತಿದ್ದನು. ಈ ಎಲ್ಲಾ ಸಂಭವಿಸುವಿಕೆಗಳ ಪ್ರತಿಧ್ವನಿಯು ಉನ್ನತವಲಯದ ಆಳ್ವಿಕೆಯಿಂದ ಪರವಾನಿಗೆ ಪಡೆದವುಗಳು ಎಂದು ಆತನು ನಂಬಿದ್ದನು. ಸಂಪೂರ್ಣ ರಾಷ್ಟ್ರವು ಕರ್ತನೆಡೆಗೆ ತಿರುಗಿಕೊಂಡಿತು. ಪ್ರವಾದಿಯು ಉದ್ರೇಕದಿಂದ ನಡುಗುವುದನ್ನು ನಾನು ನೋಡಬಲ್ಲೆ.

19ನೇಯ ಅಧ್ಯಾಯದಲ್ಲಿ ಎಲೀಯನು ನಿರಾಶೆಯ ಕೊಳ್ಳವಾದ ಕರ್ಮೆಲ್ ಬೆಟ್ಟಕ್ಕೆ ಹೋಗುತ್ತಿದ್ದಂತೆ ಎಂಥ ವ್ಯತ್ಯಾಸವನ್ನು ನಾವು ಕಾಣುತ್ತೇನೆ. ಯಾಕೋಬನು ಗಮನಿಸಿದಂತೆ, "ಎಲೀಯ ನಮ್ಮಂತ ಸ್ವಭಾವದ ಮನುಷ್ಯನಾಗಿದ್ದನು" (ಯಾಕೋಬ 5:17). ಬಹುಶಃ ಯಾಕೋಬನು 1 ಅರಸು 19ರ ಬಗೆಗೆ ಯೋಚಿಸುತ್ತಿರಬಹುದು. ದೇವರು ಈ ಅಧ್ಯಾಯವನ್ನು ಬೈಬಲಿನಲ್ಲಿ ಇಟ್ಟದ್ದಕ್ಕಾಗಿ ನಾನು ಸಂತೋಷಪಡುತ್ತೇನೆ. ದೇವರು ಈ ಕಲೆಗಳಿಂದ ಕೂಡಿದ ವರ್ಣಚಿತ್ರವನ್ನು ಚಿತ್ರಿಸಿದ್ದಕ್ಕಾಗಿ ನಾನು ಸಂತೋಷ ಪಡುತ್ತೇನೆ. ನಾವು ಸಮಸ್ಯೆಗಳೊಂದಿಗೆ ಹೇಗೆ ಹೋರಾಡುತ್ತೇವೆಯೋ ಹಾಗೆಯೇ ಎಲೀಯೂ ಕೂಡಾ ಹೋರಾಡಿದನು ಎಂದು ತಿಳಿಯಲು ಇದು ಸಹಾಯಕವಾಗುವದು.

ಎಲೀಯನ ಸಮಸ್ಯೆಯನ್ನು ಪರೀಕ್ಷಿಸೋಣ, ಆತನು ಹೇಗೆ ಮಾರ್ಗವನ್ನು ಪಡೆದುಕೊಂಡನು ಮತ್ತು ದೇವರು ಆ ಸಮಸ್ಯೆಯ ಕಡೆಗೆ ಹೇಗೆ ಗಮನಹರಿಸಿದನು (1 ಅರಸು 19).

### ಹತಾಶೆಯ ಪ್ರಕರಣ (19:1-4)

"ಈಗ ಎಲೀಯನು ಎಲ್ಲಾ ಪ್ರವಾದಿಗಳನ್ನು ಕತ್ತಿಯಿಂದ ಸಂಹರಿಸಿದ್ದನ್ನೂ ಅವನು ಮಾಡಿದ ಬೇರೆ ಎಲ್ಲಾ ಕಾರ್ಯಗಳನ್ನೂ ಆಹಾಬನು ಇಜೆಬೇಲಳಿಗೆ ತಿಳಿಸಿದನು" (ವಚನ 1). ಆ ದೃಷ್ಯವನ್ನು ಚಿತ್ರಿಸಿರಿ: ಅದೊಂದು ತಡರಾತ್ರಿ. ಆಹಾಬನು ತನ್ನ ಮಲಗುವ ಕೋಣೆಯಲ್ಲಿ ಇಜೆಬೇಲಳನ್ನು ಎಚ್ಚರಿಸಲಾರೆನು ಎಂಬ ವಿಚಾರದಿಂದ ಸದ್ದಿಲ್ಲದಂತೆ ಒಳಗೆ ಬಂದನು. ಆತನು ತನ್ನ ಎರಡನೆಯ ಚಪ್ಪಲಿಯನ್ನು ಇನ್ನೇನು ತೆಗೆಯಬೇಕು ಎನ್ನುವಷ್ಟರಲ್ಲಿ ಅವಳು ಅಲುಗಾಡಿದಳು ಮತ್ತು ನಿದ್ದೆಯಲ್ಲಿಯೇ "ಆಹಾಬ?" ಎಂದಳು.

"ಪ್ರೀಯೆ ನಾನು ನಿನ್ನನ್ನು ಎಚ್ಚರಿಸಬಾರದು ಎನ್ನುತ್ತಿದ್ದೆ."

"ನೀನು ಬಹಳ ತಡವಾಗಿ ಬಂದಿ."

"ಸರಿ ಇವತ್ತಿನ ದಿನ ಬಲು ಬಿಸಿಸಿನ ದಿನವಾಗಿತ್ತು."

“ಸರಿ ನಿನ್ನ ಧ್ವನಿಯಲ್ಲಿ ನನಗೆ ಏನೂ ಕೇಳಿಸುತ್ತಿದೆ, ಆಹಾಬ ಏನೋ ಸಂಭವಿಸಿದೆ.”

“ನಾನು ಅದರ ಬಗೆಗೆ ಮುಂಜಾನೆ ತಿಳಿಸುತ್ತೇನೆ.”

“ನನಗೆ *ಈಗಲೇ* ಅದನ್ನು ಹೇಳು.” (ಏನೇ ಆಗಲಿ ನೀನು ನನ್ನ ಗಂಡನಾಗಿದ್ದಿ, ನಿನ್ನ ಹೆಂಡತಿಯಿಂದ ನೀನೇನನ್ನೋ ಮುಚ್ಚಿಡಲು ಪ್ರಯತ್ನಿಸುತ್ತಿದ್ದಿ.)

ಆಹಾಬನು ಅಲ್ಲಿ ಏನು ಸಂಭವಿಸಿತೆಂದು ಹೇಳಲು ಆರಂಭಿಸಿದನು. “ಇದೊಂದು ... ಉಹ್ ... ಭಾವೋದ್ವೇಕದ ದಿನವಾಗಿತ್ತು.”

“ಎಲೀಯನು ಬೆಂಕಿಯನ್ನು ಆಕಾಶದಿಂದ ಬರುವಂತೆ ಮಾಡಿದನು.”

ಇಜೆಬೇಲಳು ಆಕಳಿಸಿದಳು. “ಅದೊಂದು ಹಳೆಯ ತಂತ್ರವಾಗಿದೆ. ಆ ತಂತ್ರವನ್ನು ಹೇಗೆ ಮಾಡಬೇಕೆಂದು ನಾನು ನನ್ನ ಪೂಜಾರಿಗಳಿಗೆ ಕಲಿಸಿದ್ದೇನೆ.”

“ನಂತರ ಆತನು ಈಗ ಮಳೆಯಾಗುತ್ತದೆ ಎಂದು ಹೇಳಿದನು. ಆತನು ಹೇಳಿದಾಗ ಅದು ನನಗೆ ಅನ್ನಿಸಲಿಲ್ಲ, ಆದರೆ ಅದೇ ಕ್ಷಣದಲ್ಲಿ ಮಳೆಯು ಪ್ರಾರಂಭವಾಯಿತು ಮತ್ತು ಸುರಿಯಿತು.”

“ಮಳೆಯೇ?” ಇದು ಒಳ್ಳೇಯದಾಯಿತು. ನೀನು ಯಾಕೆ ಒದ್ದೆಯಾಗಿದ್ದೀ ಎಂದು ನನಗೆ ಈಗ ಗೊತ್ತಾಯಿತು. ಹೇಗೋ ಆತನ (ಎಲೀಯನ) ಹೇಳಿಕೆಯು (ಮಳೆಯು ಬರುವುದು ಎಂಬುದು) ಕೇವಲ ಕಾಕತಾಳಿಯವಾದದ್ದು ಎಂದು ನನಗೆ ಖಚಿತವಾಯಿತು. “ನೀನು ನನಗೆ ಹೇಳಬೇಕಾದುದು ಇನ್ನೂ ಏನೋ ಇದೆ.”

ಆಹಾಬನು ಎರಡು ಮೂರು ಸಾರಿ ಉಗುಳು ನುಂಗಿದನು ಆಳವಾದ ಉಸಿರೊಂದನ್ನು ತೆಗೆದುಕೊಂಡನು ಮತ್ತು “ನಂತರ ಎಲೀಯನು ಎಲ್ಲ ಪ್ರವಾದಿಗಳನ್ನು ತೆಗೆದುಕೊಂಡು ಹಳ್ಳದಕಡೆ ... ಮತ್ತು, (ಗೊಣಗಿದ ಗೊಣಗಿದ).”

“ಏನು?”

“ಎಲೀಯನು ಪ್ರವಾದಿಗಳೆಲ್ಲರನ್ನೂ ತೆಗೆದುಕೊಂಡು ಹಳ್ಳದ ಕೆಳಗೆ ... ಮತ್ತು (ಗೊಣಗಿದ, ಗೊಣಗಿದ).”

*“ಏನು?”*

“ಮತ್ತು ... ಮತ್ತು ... ಅವರೆಲ್ಲರನ್ನು *ಕೊಲ್ಲಿಸಿದನು.*”

ಈ ವಿಷಯದಲ್ಲಿ ಇಜೆಬೇಲಳು ಮುಂದಿನ ಹದಿನೈದರಿಂದ ಮೂವತ್ತು ನಿಮಿಷಗಳ ವರೆಗೆ ಆಕೆಯು ಸಿಡಿಮಿಡಿಗೊಂಡಿರಬಹುದು. ಅವಳೊಬ್ಬ ಅಸುಂತುಷ್ಟಿಯುಳ್ಳ ಸ್ತ್ರೀಯಾಗಿದ್ದಳು.

ಎಲೀಯನು ಏನನ್ನು ಸಂಭವಿಸಬೇಕೆಂದು ನಿರೀಕ್ಷಿಸಿದ್ದನೋ ಅದಾಗಲಿಲ್ಲ, ಅದು ಆಗಲು ಸಾಧ್ಯವೂ ಇಲ್ಲ, ಆಹಾಬನು ಇಜೆಬೇಲಳನ್ನು ಮದುವೆಯಾಗಿದ್ದನು.

“ನಂತರ ಅವಳು ಎಲೀಯನ ಬಳಿಗೆ ದೂತರನ್ನು ಕಳುಹಿಸಿದಳು” (ವಚನ 2ಎ). ಎಲೀಯು ಬಹುತೇಕವಾಗಿ ದೂತರನ್ನು ನಿರೀಕ್ಷಿಸಿಯೇ ಇದ್ದನು. ಆತನು ಬಂದು ಹೀಗೆ ಹೇಳಬಹುದು “ರಾಜನ ನ್ಯಾಯಾಸ್ಥಾನಕ್ಕೆ ಬಾ; ಕರ್ತನೆಡೆಗೆ ಹಿಂದಕ್ಕೆ ಹೋಗಲು ನಮಗೆ ಸಹಾಯ ಮಾಡು ಎಂದು.” ಆದರೆ ಇದು ಆ ಸಂದೇಶವಾಗಿರಲಿಲ್ಲ.

> ಆಗ ಇಜೆಬೇಲಳು ಎಲೀಯನ ಬಳಿಗೆ ದೂತರನ್ನು ಕಳುಹಿಸಿ ಅವನಿಗೆ ನೀನು (ಬಾಳನ) ಪ್ರವಾದಿಗಳ ಪ್ರಾಣವನ್ನು ತೆಗೆದಂತೆ ನಾಳೆ ಇಷ್ಟು ಹೊತ್ತಿಗೆ ನಾನು ನಿನ್ನ ಪ್ರಾಣವನ್ನು ತೆಗೆಯದೆ ಹೋದರೆ ದೇವತೆಗಳು ನನಗೆ ಬೇಕಾದದ್ದನ್ನು ಮಾಡಲಿ ಎಂದು ಹೇಳಿ ಕಳುಹಿಸಿದಳು (ವಚನ 2).

ಇನ್ನೊಂದು ಮಾತಿನಲ್ಲಿ ಇಜೆಬೆಲಳ ಸಂದೇಶವು ಎಲೀಯನಿಗೆ “ಇಪ್ಪತ್ತನಾಲ್ಕು ಗಂಟೆಗಳಲ್ಲಿ ನಾನಾದರೂ ಸಾಯುತ್ತೇನೆ ಇಲ್ಲ ನೀನಾದರೂ ಸಾಯುತ್ತಿ ಎಂದೇ ಆಗಿತ್ತು”!

ಎಲೀಯನು ಹೇಗೆ ಪ್ರತಿಕ್ರಿಯಿಸಿದನು? “ಅವನು ಇದನ್ನು ಕೇಳಿದ ಕೂಡಲೇ ತನ್ನ ಪ್ರಾಣ

ರಕ್ಷಣೆಗಾಗಿ ಯೆಹೂದದ ಬೇರ್ಷಬಕ್ಕೆ ಬಂದನು"[1] (ವಚನ 3ಎ). ಕರ್ಮೆಲ್ ಬೆಟ್ಟದಲ್ಲಿ ಸಾವಿರಾರು ಜನರು ಆಯುಧಗಳನ್ನು ಹೊಂದಿದವರ ಮುಂದೆ ನಿಂತವನು ಈಗ ವ್ಯಸನಿಯಾದ ರಾಣಿಯಿಂದ ಓಡಿ ಹೋದನು.

ಆತನು "ತನ್ನ ಪ್ರಾಣ ರಕ್ಷಣೆಗಾಗಿ ಯೆಹೂದ್ಯದ ಬೆರ್ಷಬಕ್ಕೆ ಬಂದನು" (ವಚನ 3ಬಿ). ಬೇರ್ಷೆಬವು ಇಜ್ರೇಲಿನಿಂದ ಒಂದು ನೂರು ಮೈಲಿ ದೂರವಿದ್ದು ಯುದಾಯದ ದಕ್ಷಿಣ ಭಾಗವಾಗಿತ್ತು. ಎಲೀಯನು ಅಲ್ಪ ವಿಶ್ರಾಂತಿಯನ್ನು ಪಡೆಯದೆ ಅಥವಾ ಮಲಗದೇ ಮತ್ತು ಬಹುಶಃ ಏನನ್ನು ತಿನ್ನದೆ, ನೂರು ಮೈಲಿ ದೂರ ಓಡಿ ಹೋದನು.

ಆತನು ಬೇರ್ಷಬವನ್ನು ಮುಟ್ಟಿದೊಡನೆಯೇ "ಅಲ್ಲಿ ತನ್ನ ಸೇವಕನನ್ನು ಬಿಟ್ಟನು" (ವಚನ 3ಸಿ). ಇದೇ ಸೇವಕನ ಬಗೆಗೆ ನಾವು ಹಿಂದಿನ ಅಧ್ಯಾಯದಲ್ಲಿ ವಿವರವಾಗಿ ಆತನ ಪರಿಚಯವನ್ನು ತಿಳಿದಿದ್ದೆವು.[2] ಎಲೀಯನ ಕಾರಣಗಳು ಏನೇ ಇರಲಿ ಎಲೀಯನು ಆತನನ್ನು ಹಿಂದಕ್ಕೆ ಬಿಟ್ಟನು.[3]

ಎಲೀಯನು ಬೆರ್ಷೆಬದಲ್ಲಿಯೇ ಉಳಿಯಲ್ಲಿ, ಆ ಪಟ್ಟಣವು ಸಿನಾಯಿ ಅರಣ್ಯದೊಳಗೆ ಇತ್ತು ಆತನು ಒತ್ತಡಕ್ಕೆ ಒಳಗಾಗಿದ್ದನು. "ತಾನೊಬ್ಬನೇ ಅರಣ್ಯದೊಳಗೆ ಒಂದು ದಿವಸ ಪ್ರಯಾಣದಷ್ಟು ದೂರ ಹೋಗಿ ಜಾಲೀಗಿಡದ ಕೆಳಗೆಕೂತುಕೊಂಡನು" (ವಚನ 4ಎ). ಕೆಲ ಭಾಷಾಂತರಗಳು ಕುರುಚಲ ಗಿಡದ ಕೆಳಗೆ ಕುಳಿತನು ಎಂದಿದೆ ಇದೊಂದು ಸಣಕಲು ಕಂಟಿಯಾಗಿದ್ದು ಇದು ಕೆಲಸಾರಿ ಹತ್ತು ಅಥವಾ ಹನ್ನೆರಡು ಅಡಿ ಎತ್ತರವನ್ನು ಹೊಂದಿರುತ್ತಿತ್ತು. ಇದು ಅಷ್ಟೊಂದು ನೆರಳನ್ನು ಕೊಡುತ್ತಿರಲಿಲ್ಲ, ಆದರೆ ಉಳಿದವುಗಳಿಗಿಂತ ಉತ್ತಮವಾಗಿತ್ತು.

ಅಲ್ಲಿ ಆತನು "ಮರಣವನ್ನು ಅಪೇಕ್ಷಿಸಿದನು" (ವಚನ 4ಬಿ).[4] ಇದೊಂದು ವಿಪರ್ಯಾಸವಲ್ಲವೇ? ಆತನು ತನ್ನ ಜೀವಿತದಿಂದ ಓಡಿಹೋಗ ಬಯಸುತ್ತಿದ್ದಾನೆ, ಆತನು ಇಜೆಬೇಲಳಿಂದ ಕೊಲ್ಲಲ್ಪಡಬಾರದು ಎಂದೇ, ಅಂತೆಯೇ ಹೀಗೆ ಹೇಳುತ್ತಾನೆ "ಅವನು" ನಾನು ಸಾಯಬೇಕು ಎಂದು ಆತನು ಬಯಸಿದನು ಹಾಗೆಯೇ ಆತನು ಮುಂದುವರೆಸುತ್ತಾ "ಯೆಹೋವನೇ ನನಗೆ ಸಾಕಾಯಿತು" ಮತ್ತು "ನನ್ನ ಪ್ರಾಣವನ್ನು ತೆಗೆದುಬಿಡು ನಾನು ನನ್ನ ಪಿತೃಗಳಿಗಿಂತ ಉತ್ತಮನಲ್ಲ (ನನ್ನ ಪಿತೃಗಳು, ದೇವರ ಸೇವಕರಾದ ನನಗಿಂತ ಮೊದಲು ಬಂದವರು)" (ವಚನ 4ಸಿ).[5] ಪ್ರತ್ಯಕ್ಷವಾಗಿ ಆತನು ತನ್ನ "ಪಿತೃಗಳಿಗಿಂತ ಉತ್ತಮನು" ಎಂದು ಭಾವಿಸಿದ್ದನು. ಅವರು ಮಾಡದ ಸಂಗತಿಯನ್ನು ತಾನು ಮಾಡಿದ್ದೆನೆಂದು ಆತನು ಭಾವಿಸಿದ್ದನು: ಇಸ್ರಾಯೇಲ್ಯರನ್ನು ದೇವರೆಡೆಗೆ ತಿರುಗಿಸಿದನು. ಇದು ಸಂಭವಿಸಲಿಲ್ಲ, ಹೀಗೆ ಆತನು, "ನಾನು ನನ್ನ ಪ್ರವಾದಿಯ ಕೆಲಸದಿಂದ ಹಿಂದಕ್ಕೆ ತಿರುಗುತ್ತೇನೆ. ನಾನು ಸಾಯಲು ಸಿದ್ಧವಾಗಿದ್ದೇನೆ."

ಇಲ್ಲಿ ನಾವು ನಿರಾಶೆಯ ಅತ್ಯಕೃಷ್ಟವಾದ ಪ್ರಕರಣವನ್ನು ನೋಡುತ್ತೇವೆ: ಕೆಳಗೆ ಬಿದ್ದ ಒಬ್ಬನು, ತನ್ನ ಸ್ಥಿತಿಯು ನಿರಾಶಾದಾಯಕವಾದುದ್ದು ಎಂದು ತಿಳಿದುಕೊಂಡವನೂ, ಪರಿಸ್ಥಿತಿಯ ಒತ್ತಡದಲ್ಲಿ ಸಿಲುಕಿಹಾಕಿಕೊಂಡನೂ ಆಗಿದ್ದನು. ಇಂಥ ಪರಿಸ್ಥಿತಿಗಳು ನಮ್ಮ ಜೀವನದಲ್ಲಿ ಒಂದು ಬಾರಿಯಾದರೂ ಬರುತ್ತವೆ.

ಎಲೀಯು ಜಾಲೀಗಿಡದ ಕೆಳಗಿನ ಸ್ಥಿತಿಗೆ ಯಾಕೆ ಇಳಿದುಹೋದನು?

ಮೊದಲನೆಯದಾಗಿ ಆತನು ಮಾನುಷ ತರ್ಕದಿಂದ ಆತನು ನಡೆಸಲ್ಪಟ್ಟಿದ್ದನೇ ಹೊರತು, ದೈವಿಕ ಪ್ರಕಟನೆಯಿಂದಲ್ಲ. ಆತನು ದೇವರೊಂದಿಗಿನ ಸಂಬಂಧದ ಮಾರ್ಗದಿಂದ ದೂರಕ್ಕೆ ಸರಿದನು. ಇಲ್ಲಿಯವರೆಗೆ ಆತನು "ಯೆಹೋವನ ವಾಕ್ಯವು" ಮುಂದಿನ ಹೆಜ್ಜೆಯನ್ನು ತೋರಿಸುವವರೊ ಆತನು ನಿಲ್ಲುತ್ತಿದ್ದನು, ಆದರೆ ಈ ಸಮಯದಲ್ಲಿ ಇಲ್ಲ. ಆತನು ಈಗ ದೇವರಿಗಿಂತಲೂ, ತನ್ನದೇ ಆದ ಆಲೋಚನೆಯ ಮೇಲೆ ಆತನು ಆತುಕೊಂಡನು.

ಒಂದು ವೇಳೆ ಆತನು "ದೇವರ ವಾಕ್ಯದ" ಮೇಲೆ ಆತುಕೊಂಡಿದ್ದಾದರೆ ಏನಾಗುತ್ತಿತ್ತು?

ಆತನು ಹೀಗೆ ಹೇಳಬಹುದೆಂದು ಊಹಿಸುತ್ತೇನೆ, "ದೇವರೇ ಇಲಬೇಲಳು ನನ್ನ ಪ್ರಾಣವನ್ನು ತೆಗೆಯುವ ಒಪ್ಪಂದವನ್ನು ಮಾಡಿಕೊಂಡಿದ್ದಾಳೆ, ಮತ್ತು ನನಗೆ ಭಯವಾಗುತ್ತಿದೆ" ಎನ್ನುತ್ತಿದ್ದನೇನೋ.

"ನೀನು ಕುಚೋದ್ಯ ಮಡುತ್ತಿರಬಹುದು! ನೀನು ಅರಸನನ್ನು ಆತನ ಸೇನೆಯನ್ನೂ ಬಾಳನ 450 ಪ್ರವಾದಿಗಳ ಈಟಿ ಚಾಕುಗಳ ಆಯುಧಗಳನ್ನೂ ಮತ್ತು ಸಾವಿರಾರು ಇಸ್ರಾಯೇಲ್ಯರನ್ನೂ ಸೋಲಿಸಿದ ನಂತರವೂ ಈ ಮೂರ್ತಿಪೂಜಕಳಿಂದ ಭಯಪಡುತ್ತಿದ್ದೀಯಾ? ಆಕೆಯು ಹೆಚ್ಚೆಂದರೆ ಅವಳೇನು ಮಾಡಾಳು?"

"ಆಕೆಯು ನನ್ನನ್ನು ಕೊಲ್ಲಲು ಪ್ರಯತ್ನಿಸುತ್ತಿದ್ದಾಳೆ."

"ಅವಳೇನು ಮಾಡುತ್ತಾಳೆ? ದೇಹವನ್ನು ಕೊಲ್ಲುವವರಿಗಾಗಿ ಭಯಪಡಬೇಡ.[6] ಒಂದು ವೇಳೆ ಆಕೆಯು ನಿನ್ನನ್ನು ಕೊಂದಿದ್ದರೆ ನೀನು ನನ್ನ ಜೊತೆ ನನ್ನ ಮನೆಯಲ್ಲಿರಲು ಬರುವಿ."

"ನಾನೇನು ಮಾಡಬೇಕು?"

"ನೀನೆಲ್ಲಿ ಇದ್ದಿಯೋ ಅಲ್ಲಿಯೇ ಇರು. ನೀನು ಮಾಡಬಹುದಾದ ಇನ್ನೂ ಕೆಲ ಸಂಗತಿಗಳು ನನ್ನಲ್ಲಿ ಇನ್ನೂ ಇವೆ."

ಹೇಗೋ ಎಲೀಯನು "ದೇವರ ವಾಕ್ಯಕ್ಕಾಗಿ ಕಾಯಲಿಲ್ಲ." ನಾವು ಜೀವಿತವನ್ನು ಮಾನವನ ಕಣ್ಣುಗಳಲ್ಲಿ ನೋಡಿದ್ದಾದರೆ ನಾವು ದೂರದರ್ಶಕದ ತಪ್ಪಾದ ಕೊನೆಯಿಂದ ನೋಡುತ್ತೇವೆ. ನಮ್ಮ ದೃಷ್ಟಿಕೋನವು ಗೊಂದಲಕ್ಕೀಡಾಗುತ್ತದೆ.

ಎರಡನೆಯದಾಗಿ, ಇದರ ಪರಿಣಾಮವಾಗಿ, ಎಲೀಯು ಸ್ಪಷ್ಟವಾಗಿ ಯೋಚಿಸ ಲಿಲ್ಲ, ಆತನ ಯೋಚನಾ ಲಹರಿಯು ತುಂಡಾಗಿ ಹೋಯಿತು. ಆತನು ಒಂದ ವೇಳೆ ಸ್ಪಷ್ಟವಾಗಿ ಯೋಚಿಸಿದ್ದೇ ಆದರೆ ಆತನು ಕರ್ಮೆಲ್ ಬೆಟ್ಟದಲ್ಲಿ ದೇವರ ಸಹಾಯದೊಂದಿಗೆ ಸಾವಿರಾರು ಜನರನ್ನು ಸೋಲಿಸಿದ್ದರ ಕಾರಣವನ್ನು ಕೊಡಬಹುದಿತ್ತು, ಆತನು ಖಚಿತವಾಗಿ ಒಬ್ಬ ಸ್ತ್ರೀಯಿಂದ ಭಯ ಪಡಬೇಕಾಗಿರಲಿಲ್ಲ. ಬದಲಾಗಿ ನಕಾರಾತ್ಮಕ ವಿಚಾರಗಳು ಅವನ ಮನದಲ್ಲಿ ತಂಬಿದವು; ಅವುಗಳು ಅವನ ತಲೆಯಲ್ಲಿ ತಿರುಗತೊಡಗಿದವು.

ಮೂರನೆಯದಾಗಿ, ಆತನಿಗೆ ಭಯವು ಕೊಡಲ್ಪಟ್ಟಿತು. ನಾವು ಭಯದೊಳಕ್ಕೆ ಇರಿಸಲ್ಪಟ್ಟಾಗ ಅಣಬೆಯಂತಿರುತ್ತವೆ. ಮಗುವಾಗಿದ್ದಾಗ ನಾವು ಕತ್ತಲೆಯಲ್ಲಿ ನಡೆದ್ದನ್ನು ಮತ್ತು ನನ್ನ ಹಿಂದೆ ಯಾರೋ ಇದ್ದಾರೆ ಎಂದು ಊಹಿಸಿದ್ದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಅದನ್ನು ನಾನು ನಿರ್ಲಕ್ಷಿಸಲೆತ್ನಿಸುತ್ತೇನೆ ಮತ್ತು ಚಿಕ್ಕ ರಾಗವನ್ನು ಸಿಳ್ಳೆ ಹಾಕುತ್ತೇನೆ. ನಾನು ಬೇಗನೆ ಹೆಜ್ಜೆಯನ್ನು ಹಾಕುವುದಕ್ಕೆ ಪ್ರಾಂಭಿಸುತ್ತೇನೆ, ಆಗಿನದಕ್ಕಿಂತ ಇನ್ನೂ ವೇಗವಾಗಿ ನಾನು ಲಘುವಾಗಿ ಓಡಲು ಪ್ರಾರಂಭಿಸುತ್ತೇನೆ, ವೇಗವಾಗಿ ಮತ್ತು ವೇಗವಾಗಿ ಹೋಗುತ್ತಾ ನನ್ನ ಪುಟ್ಟದಾದ ಕಾಲುಗಳು ಹೇಗೆ ನನ್ನನ್ನು ಹೊತ್ತುಕೊಂಡು ಹೋಗುತ್ತಿದ್ದವು ಅದರಂತೆಯೇ ನಾನು ವೇಗವಾಗಿ ಹೋಗುತ್ತಿದ್ದೆನು. ನಾನು ಮನೆಯನ್ನು ತಲುಪಿದಾಗ, ನನ್ನ ಹೃದಯವು ಬಡಿದುಕೊಳ್ಳುತ್ತಿತ್ತು.[7] ಎಲೀಯನಿಗೆ ಭಯವು ಕೊಡಲ್ಪಟ್ಟಾಗ, ಆತನು ಒಂದು ನೂರು ಮತ್ತು ಅದಕ್ಕಿಂತ ಹೆಚ್ಚಿನ ಮೈಲಿನವರೆಗೆ ಓಡುವದನ್ನು ನಿಲ್ಲಿಸಲಿಲ್ಲ!

ನಾಲ್ಕನೆಯದಾಗಿ, ವಿಜಯದ ನಂತರ ಬರಬಹುದಾದಂತಹ ನಿರಾಶೆಗೆ ಆತನು ಸಿದ್ಧನಾಗಿರಲಿಲ್ಲ. ವಿಜಯವು ನಮಗೆ ಅತಂಕಕ್ಕೀಡು ಮಾಡುತ್ತದೆ. ಲಾರ್ಡ್ಸ್ ಚರ್ಚಿನ ಸಭೆಯ ಹಾಜರಾತಿಯು ಸಂಖ್ಯೆಯೂ ಕೂಡಾ ಒಂದು ದೊಡ್ಡ ಘಟನೆಯ ನಂತರ ಇಳಿಮುಖವಾಗಲು ಸಾಧ್ಯ. ಎಲೀಯನು ಇಂತಹ ಇಳಿಯುವಿಕೆಗೆ ಸಿದ್ಧನಾಗಿರಲಿಲ್ಲ.

ಐದನೆಯದಾಗಿ, ಆತನು ತನ್ನನ್ನು ತಾನೇ ಬಲದ ಮೂಲದಿಂದ ಕಡಿದುಕೊಂಡನು. ಆತನು ತನ್ನನ್ನು ತಾನು ದೇವರಿಂದ ಕಡಿದುಕೊಂಡನು; ಆತನು ದೇವರ ವಾಕ್ಯಕ್ಕಾಗಿ ಕಾಯಲಿಲ್ಲ. ಆತನು ತನ್ನನ್ನು ತಾನು ಮನುಷ್ಯರಿಂದ ಕಡಿದುಕೊಂಡನು; ಕಾರಣವು ಯಾವುದೇ ಆಗಿರಲಿ, ಆತನು ತನ್ನ ಸೇವಕನಿಗೆ ವಂದನಾರ್ಪಣೆಯನ್ನು ಸಲ್ಲಿಸಿದನು.

ಎಲೀಯನು "ಜೀವಂತವಿದ್ದ ಏಕಾಂಗಿ ಮನುಷ್ಯನು" ಎಂದು ಕರೆಯಲ್ಪಟ್ಟನು.

ಕುಗ್ಗಿದ ಜನರು ಹೆಚ್ಚಾಗಿ ಏಕಾಂಗಿಯಾಗಿರುತ್ತಾರೆ. ವಿಚಿತ್ರ ಸಂಗತಿ ಎಂದರೆ, ಅವರು ಏಕಾಂಗಿಯಾಗಿದ್ದಾಗಲೂ ಇತರರಿಂದ ತಮ್ಮನ್ನು ತಾವು ಮಾರ್ಪಡಿಸಿದಂತೆ ಬೇರ್ಪಡಿಸಿ ಕೊಂಡಿರುತ್ತಾರೆ. "ನನಗೆ ಯಾರನ್ನೂ ನೋಡಲು ಮನಸ್ಸಿಲ್ಲ. ನನಗೆ ಸುತ್ತಲೂ ಜನರು ಇರುವುದು ಬೇಕಿಲ್ಲ." ಅದೊಂದು ಕೆಟ್ಟ ಜನರಿಂದ ಕೂಡಿದ ಗುಂಪಾಗಿರುತ್ತದೆ.

ದೇವರು ನಮ್ಮನ್ನು ಹೀಗೆ ಮಾಡಿದ್ದು ನಾವು ಇತರರಿಗೆ ಸಹಾಯವಾಗಲೆಂದೇ. "ಮಾನವನು ಒಂಟಿಯಾಗಿರುವದು ಒಳ್ಳೇಯದಲ್ಲವೆಂದು ..." (ಆದಿಕಾಂಡ 2:18). ಯೇಸುವೂ ಕೂಡಾ ಗೆತ್ಸೆಮನೆಯ ತೋಟದಲ್ಲಿ ತನ್ನ ಶಿಷ್ಯರು ತನ್ನ ಜೊತೆಗೆ "ಎಚ್ಚರದಿಂದಿರಲು" ಬಯಸಿದನು (ಮತ್ತಾಯ 26:40).

ಎಲೀಯು ತನ್ನ ಆಧಾರಗಳ ವ್ಯವಸ್ಥೆಗಳನ್ನು ಕಡಿದುಹಾಕಿದ್ದನು.

ಆರನೆಯದಾಗಿ, ಆತನು ತನ್ನನ್ನು ತಾನು ಅತಿಯಾಗಿ ಬಳಲಿಸಿಕೊಂಡನು. ಆತನು ಅನೇಕ ದಿನಗಳಿಂದ ಊಟಮಾಡಿರಲಿಲ್ಲ. ಅನೇಕ ಮೈಲಿಗಳವರೆಗೆ ಆತನು ಓಡಿದನು. ಆತನು ದೈಹಿಕವಾಗಿ, ಭಾವನಾತ್ಮಕವಾಗಿ, ಮತ್ತು ಆತ್ಮೀಕವಾಗಿ ಬಹುವಾಗಿ ಬಳಲಿದ್ದನು. ಗ್ರೀಕರ ಒಂದು ಹೇಳಿಕೆಯಲ್ಲಿ: "ಬಾಣವು ಒಂದು ವೇಳೆ ಬಾಗಿಸಿ ಇಡಲ್ಪಟ್ಟಿದ್ದರೆ, ಅದು ಮುರಿದು ಹೋಗುತ್ತದೆ." ಎಲೀಯನು ಮುರಿಯಲ್ಪಟ್ಟನು.

ಇದು ಇಂದೂ ಕೂಡಾ ಪ್ರಮುಖ ಸಮಸ್ಯೆಯಾಗಿದೆ. ಪ್ರತಿದಿನದಲ್ಲಿ ಇಪತ್ತೈದು ತಾಸುಗಳ, ಪ್ರತಿ ತಿಂಗಳುಗಳಲ್ಲಿ ಮುವತ್ತೆರಡು ದಿನಗಳ ಕಾರ್ಯಕ್ರಮವನ್ನು ನಾವು ಹಾಕಿಕೊಳ್ಳುತ್ತೇವೆ. ನಾವು ನಮ್ಮ ಜೀವಿತದ ಹೆದ್ದಾರಿಯ ವೇಗದ ಸಾಲಿನಲ್ಲಿ, ನಿರ್ಗಮನವಿಲ್ಲದರ ಜೊತೆ ವೇಗವಾಗಿ ಹೋಗುವುದರಲ್ಲಿ ನಮ್ಮನ್ನು ಕಂಡುಕೊಳ್ಳು ತ್ತೇವೆ. ನಾವು ಒಂದು ವೇಳೆ ಜಾಗೂಕರಾಗಿಲ್ಲದೆ ಹೋದರೆ, ನಾವು ಸಂಪೂರ್ಣವಾಗಿ ಮುಗಿದುಹೋಗುವ ಅಂತ್ಯದಲ್ಲಿರಬಹುದು. ನಮ್ಮ ಮನಸ್ಸು ಹತಾಶೆಯ ಗಂಭೀರವಾದ ಪ್ರಕರಣವಾಗಿರುತ್ತದೆ ಮತ್ತು ಅನೇಕ ಭಾವನಾತ್ಮಕ ಚಕ್ಕಡಿಯ ಗಾಲಿಯಾಗಿರುತ್ತದೆ. ಎಲೀಯನು ಬಲುವಾಗಿ ದಣಿದಿದ್ದನು ಇಜೆಬೇಲಳನ್ನು ಬೇಟಿಯಾಗುವುದು ಉಚಿತವೋ ಅನುಚಿತವೋ ಎಂಬ ನಿರ್ಧಾರವನ್ನು ಅವನಿಂದ ಮಾಡಲಾಗಲಿಲ್ಲ!

ಏಳನೆಯದಾಗಿ ಆತನು ಸ್ವಾನುಕಂಪದಲ್ಲಿ ಮುಳುಗಿ ಹೋಗಿದ್ದನು. "ನಾನು ಬಲುವಾಗಿ ಪ್ರಯತ್ನಿಸಿದೆ" ಆದರೆ ಏನನ್ನೂ ಸಾಧಿಸಲು ನಿನ್ನಿಂದಾಗಲಿಲ್ಲ, ನಾನು ಒಳ್ಳೇಯವನಲ್ಲ! ಎಂದು ಆತನು ಹೇಳುತ್ತಾನೆ. ಆ ಅಭಿವೃತ್ತಿಯು ಮಾನವನ ಅಭಿವೃತ್ತಿಯಾಗಿದೆ ಎಂದು ಕೆಲವರು ಯೋಚಿಸುವವರಾಗಿದ್ದಾರೆ, ಆದರೆ ಇದು ಆಗಬಾರದು. ಇದು ವಿರೋಧವನ್ನು ಸೂಚಿಸುವುದಾಗಿದೆ. ನುಣುಚಿಕೊಳ್ಳುವದು ಸ್ವಾರ್ಥತೆಯ ಒಂದು ರೀತಿಯಾಗಿದ್ದು, ತನ್ನ ಬಗೆಗೆ ಅತಿಯಾಗಿ ಯೋಚಿಸುವುದೇ ಆಗಿದೆ.

ಸ್ವಾನು ಕಂಪನವು ಒಂದು ಪೆಡಂಭೂತವಾಗಿದೆ. ಇದು ನಮ್ಮ ಕಿವಿಗಳಲ್ಲಿ ಸುಳ್ಳನ್ನು ಅರಹುವದು, ನಂತರ ಅದನ್ನು ದೊಡ್ಡದು ಮಾಡುತ್ತದೆ, ಇದಕ್ಕಿಂತ ಕೆಟ್ಟದ್ದನ್ನು ಪ್ರತಿಯೊಬ್ಬರೂ ಕಾಣುವಂತೆ ಮಾಡುತ್ತದೆ. ಸ್ವಾನುಕಂಪವು ವೈಯಕ್ತಿಕ ಆತ್ಮಹತ್ಯೆ ಎಂದು ಪರಿಗಣಿಸಲ್ಪಡುತ್ತದೆ. "ಯೆಹೋವನೇ ನನಗೆ ಸಾಕಾಗಿದೆ" ಎಂದ ಎಲೀಯನು ಇನ್ನೂ ಮುಂದಾಗಿ ಹೀಗೆ ಹೇಳಿದನು, "ನನ್ನ ಪ್ರಾಣವನ್ನು ತೆಗೆದುಬಿಡು."

ಎಲೀಯನು ಎಲ್ಲಿದ್ದಾನೆಂದು ನೀವು ನೋಡುವಿರೋ? ಈ ಶ್ರೇಷ್ಟ ದೇವರ ಮನುಷ್ಯನು ನಿರಾಶೆ ಮತ್ತು ಒತ್ತಡಕೊಳಗಾಗುವದು. ಇದು ಯಾರಿಗಾದರೂ ಸಂಭವಿಸುತ್ತದೆ. ಮೋಶೆಯು ತನಗೆ ಮರಣವನ್ನು ಬಯಸಿದನು (ಅರಣ್ಯಕಾಂಡ 11:15), ಅದರಂತೆಯೇ ಯೋಬನೂ (ಯೋಬ 3:1 ಹೋಲಿಸಿರಿ) ಮತ್ತು ಯೋನನು ಕೂಡಾ (ಯೋನಾ 4:3). ಪೌಲನು ತನ್ನ ಜೀವಿತದಿಂದ ಒತ್ತಡಕ್ಕೊಳಗಾದನು (2 ಕೊರಿಂಥ 1:8). ಇದು ನಿನಗೆ ಸಂಭವಿಸಬಹುದು.

## ಹತಾಶೆಯ ಪ್ರಕರಣವನ್ನು ದೇವರು ಹೇಗೆ ಪರಿಹರಿಸಿದನು (19:5-21)

ಉಳಿದ ಕಥೆಯನ್ನು ನಾವು ವಿಚಾರಿಸುವಾ. ನಂತರ ನಾವು ಹತಾಶೆಯ ಪ್ರಕರಣವನ್ನು ದೇವರು ಹೇಗೆ ಪರಿಹರಿಸಿದನು ಎಂಬುದನ್ನು ಸರಾಂಶಿಕರಿಸಿಕೊಳ್ಳುವಾ. ನಾವು ನಮಗೋಸ್ಕರ ಮತ್ತು ಇತರರಿಗೋಸ್ಕರವಾಗಿ ಹೇಗೆ ಸಹಾಯ ಮಾಡಬಹುದೆಂದು ನಾವು ಕಲಿತುಕೊಳ್ಳಬಹುದು.

> ದೇವರನ್ನು ಪ್ರಾರ್ಥಿಸಿ ಅದೇ ಗಿಡದ ಕೆಳಗೆ ಮಲಗಿಕೊಂಡು ನಿದ್ರೆ ಮಾಡಿದನು ಫಕ್ಕನೆ ಒಬ್ಬ ದೇವದೂತನು ಅವನನ್ನು ತಟ್ಟಿ - ಎದ್ದು ಊಟಮಾಡು ಎಂದನು. ಎಲೀಯನು ಎದ್ದು ನೋಡಲಾಗಿ ಕೆಂಡದ ಮೇಲೆ ಸುಟ್ಟರೊಟ್ಟಿಯೂ[8] ಒಂದು ತಂಬಿಗೆ ನೀರು ತನ್ನ ತಲೆಯ ಹತ್ತಿರ ಇರುವುದನ್ನು ಕಂಡು ಅವುಗಳನ್ನು ತೆಗೆಕೊಂಡು ತಿಂದು ಕುಡಿದು ತಿರಗಿ ಮಲಗಿದನು (ವಚನಗಳು 5, 6).

ದೇವರು ಈ ಹಿಂದೆಯೇ ಕಾಗೆಗಳನ್ನು ಮತ್ತು ವಿಧವೆಯನ್ನು ಆತನಿಗೆ ಆಹಾರ ಒದಗಿಸಲು ಉಪಯೋಗಿಸಿದ್ದನು.

> ಯೆಹೋವನ ದೂತನು ಎರಡನೆಯ ಸಾರಿಬಂದು ಎದ್ದು ಊಟಮಾಡು ನೀನು ನಿನ್ನ ಶಕ್ತಿ ಮೀರುವಷ್ಟು ಪ್ರಯಾಣ ಮಾಡಬೇಕಾಗಿದೆ ಅಂದನು. ಅವನು ಎದ್ದು ತಿಂದು ಕುಡಿದು ಅದರ ಬಲದಿಂದ ನಾಲ್ವತ್ತು ದಿವಸ ಹಗಲಿರುಳು ಪ್ರಯಾಣಮಾಡಿ ದೇವಗಿರಿಯಾದ ಹೋರೇಬಿಗೆ ಮುಟ್ಟಿ ಅಲ್ಲಿನ ಒಂದು ಗವಿಯಲ್ಲಿ ಇಳುಕೊಂಡನು (ವಚನಗಳು 7, 8).

"ಹೋರೇಬ" ಸಿನಾಯಿ ಬೆಟ್ಟಕ್ಕೆ ಇರುವ ಇನ್ನೊಂದು ಹೆಸರು ಇದಾಗಿದ್ದು, ಈ ಬೆಟ್ಟದಲ್ಲಿಯೇ ಮೋಶೆಯು ಧರ್ಮಶಾಸ್ತ್ರವನ್ನು ಪಡೆದಿದ್ದನು.[9] (ನಾವು ನಾಲ್ವತ್ತು ದಿನಗಳ ವರೆಗೆ ತಿರುಗಿ ತಿರುಗಿ ಅಡಿಗೆಯನ್ನು ಮಾಡುವುದು ಅವಶ್ಯವಿಲ್ಲವೆಂದು ಆಶಿಸಬಹುದು!)

"(ಆಗ ಎಲೀಯನು) ಅಲ್ಲಿನ ಗವಿಯಲ್ಲಿ ಇಳುಕೊಂಡನು" (ವಚನ 9ಎ).[10] ಪ್ರವಾದಿಗಳು ಗವಿಗಳಲ್ಲಿ ವಾಸಿಸುವವರಾಗಿದ್ದರು. ಆತನು ತನ್ನನ್ನು ತಾನು ಜಗತ್ತಿನಿಂದ ಬೇರ್ಪಡಿಸಿಕೊಂಡನು.

"ಆಗ ಅವನಿಗೆ ಯೆಹೋವನಿಂದ ವಾಕ್ಯವು ಬಂದಿತು" (ವಚನ 9ಬಿ). ಈಗ "ಯೆಹೋವ ನಿಂದ" ವಾಕ್ಯವು ಬಂದಿತು. ಆತನು ಅವನಿಗೆ "ಎಲೀಯನೇ, ನೀನು ಇಲ್ಲೇನು ಮಾಡುತ್ತೀ?" (ವಚನ 9ಕ). ಎಂದು ಕೇಳಿದನು. ಒಂದು ವೇಳೆ ದೇವರು ಇದನ್ನು ಏಕೆ ಹೇಳಿದನು ಎಂಬುದನ್ನು ನಾವು ತಿಳಿದಿದ್ದಾದರೆ, ನಾವು ಇದು ಅಣಕಿಸುವಿಕೆಯಲ್ಲವೋ ಎಂದು ತಿಳಿದುಬಿಡುತ್ತಿದ್ದೆವು. ಒಂದು ವೇಳೆ ಇದು ಅಣುಕಿಸುವಿಕೆಯಾಗಿದ್ದರು, ಅದು ಲಘುವಾಗಿದ್ದು: "ನೀನು ಇಲ್ಲೇನು ಮಾಡುತ್ತಿರುವಿ ನನ್ನ ಕಾರ್ಯವನ್ನು ಇಸ್ರಾಯೇಲಿನಲ್ಲಿ ಮಾಡುವುದು ಬಿಟ್ಟು ನೀನು ಇಲ್ಲೇನು ಮಾಡುತ್ತಿದ್ದಿ?" ಎಂದಾಗಿತ್ತು.

ಎಲೀಯನು ತನ್ನ ಮನಸ್ಸಿನಲ್ಲಿ ಮಾಡಿಕೊಂಡಿದ್ದ ಎಲ್ಲರನ್ನೂ ಪಟ್ಟಿಮಾಡಲು ಆರಂಭಿಸಿದನು:

> ಅವನು ಅದಕ್ಕೆ[11] ಸೇನಾಧಿಶ್ವರನಾದ ದೇವರೇ, ಯೆಹೋವನೇ, ಇಸ್ರಾಯೇಲ್ಯರು ನಿನ್ನ ನಿಬಂಧನೆಯನ್ನು ಮೀರಿದ್ದಾರೆ, ಯಜ್ಞವೇದಿಗಳನ್ನು ಕೆಡವಿ ಹಾಕಿದ್ದಾರೆ, ಪ್ರವಾದಿಗಳನ್ನು ಕತ್ತಿಯಿಂದ ಸಂಹರಿಸಿದ್ದಾರೆ, ನಾನೊಬ್ಬನೇ ಉಳಿದು ನಿನ್ನ ಗೌರವವನ್ನು ಕಾಪಾಡುವಲ್ಲಿ ಆಸಕ್ತನಾಗಿದ್ದೆನು; ಆದರೆ ಅವರು ನನ್ನ ಪ್ರಾಣವನ್ನೂ ತೆಗೆಯಬೇಕೆಂದಿದ್ದಾರೆ (ವಚನ 10).

ಎಲೀಯನು ಕರ್ತನಿಗೆ, "ಕರ್ತನೇ ಇದು ಅಸಾಧ್ಯವಾದದ್ದು! ಏನನ್ನು ಮಾಡಲಾಗುವುದಿಲ್ಲ"

ಎಂದು ಹೇಳಿದನು.

ಆಗ ದೇವರು ಮಾತನಾಡಿದನು. "ಮುಂದೆ ನಿಲ್ಲು" (ವಚನ 11ಎ) ಎಂದು ಆತನು ಎಲೀಯನಿಗೆ ಗವಿಯಿಂದ ಹೊರಗೆ ಬರಲು ತಿಳಿಸಿದನು. ಮತ್ತು "ಹೊರಗೆ ಬಂದು ಬೆಟ್ಟದ ಮೇಲೆ ಯೆಹೋವನ ಮುಂದೆ ನಿಲ್ಲು" (ವಚನ 11ಬಿ). ಎಂದು ಹೇಳಿದನು. ದೇವರು ಆತನಿಗೆ "ಕಳೆದ ದಿನಗಳಲ್ಲಿ ನೀನು ನನ್ನ ಮುಂದೆ ನಿಲ್ಲತಕ್ಕವನು ಎಂದಾಗಿದ್ದಿ ಮತ್ತು ಆಜ್ಞೆಗಳನ್ನು ತೆಗೆದುಕೊಳ್ಳುವುದಕ್ಕೆ ಸಿದ್ಧನಾಗಿರುವವನಾಗಿದ್ದಿ. ನಮಗೆ ಆ ಸಂಬಂಧವನ್ನು ಪುನಃ ಸ್ಥಾಪಿಸುವದು ಅವಶ್ಯವಿದೆ" ಎಂದನು!

> ಆಗ ತಿರುಗಿ ನೀನು ಹೊರಗೆ ಬಂದು ಬೆಟ್ಟದ ಮೇಲೆ ಯೆಹೋವನ ಮುಂದೆ ನಿಲ್ಲು ಎಂಬ ವಾಣಿಯು ಆಯಿತು. ಆಹಾ, ಯೆಹೋವನು ಅಲ್ಲಿ ಹಾದು ಹೋದನು. ಆತನ ಮುಂದೆ ಪರ್ವತಗಳನ್ನು ಬೇಧಿಸಿ ಬಂಡೆಗಳನ್ನು ಪುಡಿ ಪುಡಿ ಮಾಡುವಂಥ ದೊಡ್ಡ ಬಿರುಗಾಳಿಯು ಬೀಸಿತು; ಯೆಹೋವನು ಅದರಲ್ಲಿ ಇರಲಿಲ್ಲ. ತರುವಾಯ ಭೂಕಂಪವುಂಟಾಯಿತು; ಅದರಲ್ಲಿಯೂ ಆತನಿರಲಿಲ್ಲ ಭೂಕಂಪವುಂಟಾದ ನಂತರ ಸಿಡಿಲುಂಟಾಯಿತು; ಅದರಲ್ಲಿಯೂ ಯೆಹೋವನಿರಲಿಲ್ಲ. ಕಡೆಗೆ ಮಂದಮಾರುತ ಶಬ್ಧ (ವಚನಗಳು 11ಸಿ, 12).

ದೇವರು ಇದನ್ನೆಲ್ಲ ಯಾಕೆ ಮಾಡಿದನು ಎಂಬುದರ ಬಗೆಗೆ ನನಗೆ ಖಚಿತವಾದ ಮಾಹಿತಿಯಿಲ್ಲ. ಬಹುಶಃ ಎಲೀಯನು ಈ ಸ್ಥಳಕ್ಕೆ ಬಂದಿರುವದಕ್ಕೆ ಕಾರಣ, ಮೋಶೆಯು ಧರ್ಮಶಾಸ್ತ್ರವನ್ನು ತಂದಾಗ ನೋಡಿದುದ್ದನ್ನು ಪ್ರಯೋಗ ಮಾಡುವ ತರದ ಅಭಿಲಾಶೆಯನ್ನು ಹೊಂದಿರ ಬೇಕು; ಬಹುಶಃ ಎಲೀಯನು ದೇವರು ಶಕ್ತಿಯ ದೇವರಾಗಿದ್ದಾನೆ ಎಂದು ಮುಂದೆಯೂ ದೃಢಪಡಿಸಿಕೊಳ್ಳಲು ಬಯಸಿದ್ದನೇನೋ ಇನ್ನೊಂದೆಡೆಯಲ್ಲಿ ಬಹುಶಃ ದೇವರು ತಾನು ಇನ್ನೂ ಇರುವುದಾಗಿಯೂ, ಜೀವನದ ಒಳ್ಳೇಯ ಸಂಗತಿಗಳು ಅತ್ಯಾಕರ್ಷಕವಾಗಿ ಸರಿಯಾಗಿರುವಂತೆ ಎಲೀಯನು ತಿಳಿಯ ಬೇಕೆಂದು ಬಯಸಿರಬೇಕು. ಇದೆಲ್ಲ ಊಹಾಕಾರ್ಯ. ನಾವು ಕೇವಲ ಗಾಳಿ, ಭೂಕಂಪ, ಬೆಂಕಿ ಮತ್ತು ಮಂದಮಾರುತಗಳ ಸದ್ದು ಇವುಗಳ ಪರಿಣಾಮದ ಬಗೆಗೆ ನಿಜವಾಗಿಯೂ ನಾವು ತಿಳಿಯಬೇಕಾಗಿದೆ. ಇದೆಲ್ಲವನ್ನು ದೇವರು ಮಾಡಿದ್ದು ಎಲೀಯನು ಗವಿಯನ್ನು ಬಿಟ್ಟು ಹೊರಗೆ ಬರಲೆಂದೇ.

"ಕೂಡಲೇ ಎಲೀಯನು ತನ್ನ ಕಂಬಳಿಯಿಂದ ತನ್ನ ಮೋರೆಯನ್ನು ಮುಚ್ಚಿಕೊಂಡನು" (ವಚನ 13ಎ). ಇದೇ ಮೊದಲ ಬಾರಿಗೆ ಎಲೀಯನ ಚಿಹ್ನೆಯಾಗಿರುವ ಆತನ ಕಂಬಳಿಯ ಬಗೆಗೆನಾವು ಓದುತ್ತೇವೆ (ಜೆಕರ್ಯ 13:4ನ್ನು ಗಮನಿಸಿರಿ). ಇದೊಂದು ಕೂದಲುಗಳ ಕಂಬಳಿ, ಬಹುಶಃ ಕುರಿಚರ್ಮದಿಂದ ಮಾಡಿದ್ದಾಗಿರಬಹುದು. ಎಲೀಯನು "ಹೋಗಿ ಗವಿಯ ದ್ವಾರದಲ್ಲಿ ನಿಂತನು" (ವ. 13ಬ). ಗಾಳಿ, ಭೂಕಂಪ, ಬೆಂಕಿ, ಇವುಗಳು ಗವಿಯ ಆಳದಲ್ಲಿದ್ದ ಎಲೀಯನನ್ನು ಎಳೆದು ತರಲು ಇರಬಹುದು, ಆದರೆ ಆತನು ಮುಂದುವರೆಯುತ್ತಲೇ ಇದ್ದನು! ನಾವು ನಿರಾಶೆ ಹೊಂದಿದ ಜನರೊಂದಿಗೆ ಕೆಲಸಮಾಡುತ್ತಿರುವಾಗ, ಅಲ್ಪವಾದ ಪ್ರಗತಿಯು ಆಯಾ ಸಮಯದಲ್ಲಿ ಬರುತ್ತದೆ; ಮೂರು ಹೆಜ್ಜೆ ಮುಂದೆ, ಎರಡು ಹಿಂದೆ; ಕೆಲ ಸಾರಿ ಎರಡು ಹೆಜ್ಜೆ ಮುಂದೆ, ಮೂರು ಹಿಂದೆ ಇರುತ್ತದೆ.

"ಆಗ ಎಲೀಯನೇ, ನೀನು ಇಲ್ಲೇನು ಮಾಡುತ್ತೀ ಎಂಬ ವಾಣಿಯು ಕೇಳಿಸಿತು" (ವಚನ 13ಸಿ). ಇದೇ ರೀತಿಯ ಪ್ರಶ್ನೆಯನ್ನು ದೇವರು ಈ ಮುಂಚೆ ಕೇಳಿದ್ದನು. ಆಸ್ಟ್ರೇಲಿಯದ ಕೆಲ ತೊಂದರೆಗೀಡಾದ ಕುಟುಂಬಗಳೊಂದಿಗೆ ಕೆಲಸ ಮಾಡುತ್ತಿದ್ದ ನನ್ನ ಒಬ್ಬ ಸ್ನೇಹಿತನು ನನಗೆ ಹೀಗೆಹೇಳಿದನು: "ನಿರಾಶೆಗೊಳಗಾದ ಜನರೊಂದಿಗೆ ನೀನು ಎಲ್ಲಿಂದ ಪ್ರಾರಂಭಿಸುತ್ತಿಯೋ; ಅಲ್ಲಿಂದಲೇ ಅವರಿಗೆ ಪ್ರಶ್ನೆಗಳನ್ನು ಕೇಳು." ಎಲೀಯನು ಅಲ್ಲಿ ಏಕೆ ಹಾಕಿದ್ದಾನೆಂದು ದೇವರು

ತಿಳಿದಿದ್ದನು, ಆದರೆ ಆತನು ಎಲೀಯನು ಅಲ್ಲಿಂದ ಹೊರಡುವುದಕ್ಕಾಗಿ ಆ ಪ್ರಶ್ನೆಯನ್ನು ಕೇಳಿದನು. ಎಲೀಯನ ಉತ್ತರವು ಮುಂಚಿನದಕ್ಕೆ ಪದದಿಂದ ಪದಕ್ಕೆ ಸಮಾನವಾದುದ್ದಾಗಿತ್ತು:

ಅದಕ್ಕೆ ಸೇನಾಧೀಶ್ವರನಾದ ದೇವರೇ, ಯೆಹೋವನೇ, ಇಸ್ರಾಯೇಲ್ಯರು ನಿನ್ನ ನಿಬಂಧನೆಯನ್ನು ಮೀರಿದ್ದಾರೆ:

> "ಯಜ್ಞವೇದಿಗಳನ್ನು ಕೆಡವಿಹಾಕಿದ್ದಾರೆ, ಪ್ರವಾದಿಗಳನ್ನು ಕತ್ತಿಯಿಂದ ಸಂಹರಿಸಿದ್ದಾರೆ, ನಾನೊಬ್ಬನೇ ಉಳಿದು ನಿನ್ನ ಗೌರವವನ್ನು ಕಾಪಾಡುವಲ್ಲಿ ಆಸಕ್ತನಾಗಿದ್ದೆನು; ಆದರೆ ಅವರು ನನ್ನ ಪ್ರಾಣವನ್ನೂ ತೆಗೆಯಬೇಕೆಂದಿದ್ದಾರೆ ಎಂದು ಉತ್ತರಕೊಟ್ಟನು" (ವಚನ 14).

ತನ್ನ ಮನದಲ್ಲಿನ ಈ ವಿಚಾರಗಳು ಜಾಡನ್ನು ಧರಿಸುವ ತನಕ ಎಲೀಯನು ಹೇಗೆ ಮೇಲಿಂದ ಮೇಲೆಹೋದನು; ಈಗ ಆತನು ತಾನು ಸಾಗಿಬಂದ ದಾರಿಯಿಂದ ಹೊರಬರಲಾರನು ಎಂಬುದನ್ನು ನಾವು ಊಹಿಸಬಹುದು. ನೀವು ಎಂದಾದರೂ ಅತಿಯಾದ ಒತ್ತಡಕ್ಕೆ ಒಳಗಾಗಿದ್ದಾದರೆ, ಅದೇ ನಕಾರಾತ್ಮಕವು ಪುನಃ ಬರುವುದಾಗಿದೆ ಎಂದು ನೀವು ಬಲ್ಲವರಾಗಿದ್ದೀರಿ, ವಿನಾಶಕಾರಕವಾದ ವಿಚಾರಗಳು ನಿನ್ನ ಮನದಲ್ಲಿ ಮೇಲಿಂದ ಮೇಲೆ ಇದ್ದು ನೀವು ಬುದ್ಧಿವಿಕಲ್ಪವಾಗಿದೆ ಎಂದು ಯೋಚಿಸುವ ತನಕ ಹೋಗುತ್ತದೆ.

ದೇವರು ಎಲೀಯನನ್ನು ಅಣುಕಿಸಿದ್ದು - ಅಥವಾ ಅವನನ್ನು ಸರಿಪಡಿಸಲು - ಇದೇ ಸರಿಯಾದ ಸಮಯವಾಗಿತ್ತು. ಆದರೆ ದೇವರು ಏನು ಮಾಡಿದನು ಎಂಬುದನ್ನು ಗಮನಿಸಿ: "ಆಗ ಯೆಹೋವನು ಅವನಿಗೆ ನೀನು ಬಂದ ದಾರಿಯಿಂದ ಹಿಂದಿರುಗಿ ದಮಸ್ಕದ ಅರಣ್ಯಕ್ಕೆ ಹೋಗು" (ವಚನ 15ಎ) ಎಂದು ಹೇಳಿದನು. "ಎಲೀಯನೇ ಗವಿಯಿಂದ ಹೊರಗೆ ಬಾ ಮತ್ತು ಉತ್ತರದೆಡೆಗೆ ಸಾಗು" ದಮಸ್ಕದ ಅರಣ್ಯವು ಗಲಿಲಾಯ ಸಮುದ್ರದಿಂದ ಸುಮಾರು ಈಶಾನ್ಯದಿಂದ ಮೂವತ್ತು ಮೈಲಿದೂರವಿತ್ತು.

> ಅಲ್ಲಿಂದ ಪಟ್ಟಣದೊಳಗೆ ಪ್ರವೇಶಿಸಿ ಹಜಾಯೇಲನನ್ನು ಅರಾಮ್ಯರ ಅರಸನನ್ನಾಗಿ ಅಭಿಷೇಕಿಸು;[12] ನಿಂಷಿಯ ಮಗನಾದ ಯೆಹುವನ್ನು ಇಸ್ರಾಯೇಲರ ಅರಸನನ್ನಾಗಿಯೂ ಅಬೇಲ್ ಮೆಹೋಲದವನ್ನೂ ಶಾಫಾಟನ ಮಗನೂ ಆದ ಎಲೀಷನನ್ನು ನಿನಗೆ ಬದಲಾಗಿ ಪ್ರವಾದಿಯನ್ನಾಗಿ ಅಭಿಷೇಕಿಸು. ಹಜಾಯೇಲನ ಕತ್ತಿಗೆ ತಪಿಸಿಕೊಂಡವರನ್ನು (ಅದು ಯುದ್ಧದ ಕತ್ತಿ) ಯೇಹುವು ಕೊಲ್ಲುವನು; ಇವನ ಕತ್ತಿಗೆ (ಇದು ನ್ಯಾಯದ ಕತ್ತಿ) ತಪ್ಪಿಸಿಕೊಂಡವರನ್ನು ಎಲೀಷನು ಕೊಲ್ಲುವನು (ಇದು ಸತ್ಯದ ಕತ್ತಿ).[13] ಆದರೆ ಬಾಳನ ವಿಗ್ರಹಕ್ಕೆ ಅಡ್ಡ ಬೀಳದೆಯೂ ಅದನ್ನು ಮುದ್ದಿಡದೆಯೂ ಇರುವ ಏಳು ಸಾವಿರ ಮಂದಿ ಇಸ್ರಾಯೇಲ್ಯರನ್ನು ಉಳಿಸುವೆನು ಎಂದು ಹೇಳಿದನು (ಉದಾಹರಣೆ ಬಾಳನ ವಿಗ್ರಹವನ್ನು ಮುದ್ದಿಡಬಾರದು) (ವಚನಗಳು 15ಬಿ-18).

ದೇವರು ಎಲೀಯನು ಹೇಳಿದುದ್ದಕ್ಕೆ ಎಲ್ಲಾ ನಕಾರಾತ್ಮಕವಾದ ಸಂಗತಿಗಳನ್ನೇ ಉತ್ತರಿಸಿದನು ಎಂಬುದನ್ನು ಗಮನಿಸಿರಿ:

ಎಲೀಯನು "ಇಸ್ರಾಯೇಲ್ಯರು ನಿನ್ನ ನಿಬಂಧನೆಗಳನ್ನು ಮುರಿದುಬಿಟ್ಟಿದ್ದಾರೆ" ಎಂದು ಹೇಳಿದನು; "ದೇವರು ಆತನಿಗೆ ಅರಸನಾದ ಹಜಾಯೇಲನು ಇಸ್ರಾಯೇಲನು ಶಿಕ್ಷಿಸುವದು" ಬಂದನು. ಸಿರಿಯವು ಇಸ್ರಾಯೇಲ್ಯರ ಇತರೆಲ್ಲ ನೆರೆಯ ರಾಷ್ಟ್ರಗಳಲ್ಲಿ ಬದ್ಧವಾದವೈರಿಯಾಗಿತ್ತು.

ಎಲೀಯ "ಆಹಾಬ ಮತ್ತು ಇಜಬೇಲರು ನಿನ್ನ ವೇದಿಗಳನ್ನು ಕಡಿದು ಹಾಕಿದ್ದಾರೆ." ಅದಕ್ಕೆ ದೇವರು "ಯೇಹುವು ಆಹಾಬನ ವಂಶವನ್ನು ನಾಶಮಾಡುವನು ಅಲ್ಲಿ ಅನಂತರದಲ್ಲಿ

ಬಾಳನ ಆರಾಧನೆಯಲ್ಲಿ ಇರುವುದಿಲ್ಲ" ಎಂದು ಆತನು ಉತ್ತರಿಸಿದನು. ಅಧ್ಯಾಯದಲ್ಲಿ ಮುಂದೆ ಸಾಗುತ್ತಾ ಯೇಸುವಿನ ರಕ್ತಮಯವಾದ ಕಾರ್ಯಗಳನ್ನು ನಾವು ಓದುತ್ತೇವೆ, ಇದು ಯೆಹೂದಿ ಇತಿಹಾಸದಲ್ಲಿಯೇ ನಿರ್ಮೂಲಮಾಡುವುದಕ್ಕೆ ಸಮಾನವಾಗಿರುವ ಕಾರ್ಯವಾಗಿದೆ, ಆಹಾಬನ ಕುಟುಂಬವನ್ನು ಸಂಪೂರ್ಣವಾಗಿ ಆಳಸಿ ಹಾಕಿತು. ಯೇಹುವು ಬಾಳನ ಆರಾಧಕರ ರಕ್ತವನ್ನು ಅವರು ಬಲಿಕೊಡುತ್ತಿರುವುದರೊಡನೆ ಸೇರಿಸುದಕ್ಕಾಗಿ ಬಾಳನ ದೇವಾಲದೊಳಕ್ಕೆ ಹೇಗೆ ಹೋದನೆಂಬುದನ್ನು ಸಹ ಜೋಸ್ಫಸ್‌ನು ಹೇಳುತ್ತಾನೆ.

ಎಲೀಯನು "ಅವರು ನಿನ್ನ ಪ್ರವಾದಿಗಳನ್ನು ಸಂಹರಿಸಿದ್ದಾರೆ" ಎಂದನು ದೇವರು "ಅದಕ್ಕೆ ಬದಲಾಗಿ ಎಲೀಷನೆಂಬುವನನ್ನುನಿನಗೆ ಒದಗಿಸುತ್ತೇನೆ" ಅಂದನು.

ಎಲೀಯನು "ನಾನೊಬ್ಬನೇ ಉಳಿದಿದ್ದೇನೆ" ಎಂದನು ಅದಕ್ಕೆ ದೇವರು "ಬಾಳನ ವಿಗ್ರಹಕ್ಕೆ ಅಡ್ಡ ಬೀಳದೆಯೂ ಅದನ್ನು ಮುದ್ದಿಡದೆಯೂ ಇರುವ ಏಳು ಸಾವಿರ ಮಂದಿ ಇಸ್ರಾಯೇಲ್ಯರು ಇದ್ದಾರೆ" ಎಂದನು. ದೇವರು ಎಲೀಯನಿಗೆ "ಎಲೀಯಾ ಈ ಪರಿಸ್ಥಿತಿಯು ಅಷ್ಟೊಂದು ಕೆಟ್ಟದಾಗಿಲ್ಲ. ನನ್ನ ಸಾಹಾಯದಿಂದ ನೀನು ಪ್ರತಿಯೊಂದು ಸಮಸ್ಯೆಯೊಡನೆಯೂ ಕೆಲಸ ಮಾಡಬಹುದು ಮತ್ತು ಪ್ರತಿಯೊಂದೂ ಸವಾಲನ್ನೂ ಎದುರಿಸಬಹುದು" ಎಂದು ಹೇಳಿದನು. ಇದು ದೇವರ ಪುರುಷನಿಗೆ ಮತ್ತು ಸ್ತ್ರೀಗೆ ಕಲಿಯುವುದಕ್ಕೆ ಅವಶ್ಯವಾದ ಪಾಠವಾಗಿದೆ.

"ಎಲೀಯನು ಅಲ್ಲಿಂದ ಹೊರಟು ಹೋದನು" (ವಚನ 19ಎ). ಅಂತಿಮವಾಗಿ ಆತನು ಗವಿಯಿಂದ ಹೊರಗೆ ಬಂದನು! ದೇವರ ಪ್ರಯತ್ನವನ್ನು ಕಾರ್ಯರೂಪಕ್ಕೆ ತರುವುದನ್ನು ಆತನು ನಿಲ್ಲಿಸಿಬಿಟ್ಟಿದ್ದನು. ಆತನು ಈಗ ಆತನ ದಾರಿಯಲ್ಲಿ ಬಂದನು. "ಶಾಫಾಟನ ಮಗನಾದ ಎಲೀಷನನ್ನು ಕಂಡನು ಅವನು ಹೊಲವನ್ನು ಉಳುವುದಕ್ಕೆ ಹನ್ನೆರಡು ಜೋಡಿ ಎತ್ತುಗಳನ್ನು ತಂದು ಹನ್ನೆರಡನೆಯ ಜೋಡಿಯಿಂದ ತಾನಾಗಿಯೇ ಉಳುತ್ತಿದ್ದನು" (ವಚನ 19ಬಿ).[14] ಮೂರುವರೆ ವರ್ಷಗಳ ವರೆಗೆ ಯಾರೊಬ್ಬನೂ ಧಾನ್ಯವನ್ನು ಹಾಕಲಾಗಿರಲಿಲ್ಲ; ಈ ಸಮಯವು ಇಸ್ರಾಯೇಲ ರೈತರಿಗೆ ಚಟುವಟಿಕೆಯಿಂದ ಕೂಡಿರುವಂತಹ ಸಮಯವಾಗಿರಬಹುದು.

ಗಿಲ್ಯಾದಿನ ಈ ಕಾಡುಮನುಷ್ಯನ ಬದಲಾಗಿ ಯೋರ್ದನ್ ಕಣಿವೆಯ ಕೊಳಕು ರೈತನು ದೇವರ ಬದಲಾಗಿ ಸೇವಕನಾಗಿದ್ದು! ನೀನು ಯಾರಾಗಿದ್ದೀ ಎಂಬುದು ಇಲ್ಲಿ ಮುಖ್ಯವಲ್ಲ; ಕರ್ತನಿಗೆ ನಿನ್ನ ಸಮರ್ಪಣೆಯೇ ಇಲ್ಲಿ ಮಹತ್ವವಾದದ್ದು. ನಿನ್ನ ಹೃದಯವು ಆತನ ಮೇಲೆ ನೆಲೆಸಿದ್ದರೆ ಆತನು ತನ್ನ ಸೇವೆಯಲ್ಲಿ ನಿನ್ನನ್ನು ಬಳಸುತ್ತಾನೆ!

"ಎಲೀಯನು ಅಲ್ಲಿಂದ ಹಾದುಹೋಗುತ್ತಿರುವಾಗ ತನ್ನ ಕಂಬಳಿಯನ್ನು ಅವನ ಮೇಲೆ ಹಾಕಿದನು" (ವಚನ 19) - ದೇವರು ಎಲೀಯನ ಸ್ಥಳದಲ್ಲಿ ಆತನನ್ನು ತೆಗೆದು ಕೊಂಡನು ಎಂಬುದನ್ನು ಎಲೀಷನು ತಿಳಿದುಕೊಳ್ಳಲು ಇರುವ ಒಂದು ಸಂಕೇತಾರ್ಥಕ ರೀತಿಯಾಗಿತ್ತು.

> ಕೂಡಲೆ ಅವನು ಎತ್ತುಗಳನ್ನು ಬಿಟ್ಟು ಓಡುತ್ತಾ ಬಂದು ಎಲೀಯನಿಗೆ, "ನನ್ನ ತಂದೆ ತಾಯಿಗಳನ್ನು ಮುದ್ದಿಟ್ಟು ಬರುವುದಕ್ಕೆ ಅಪ್ಪಣೆಯಾಗಲಿ ಅನಂತರ ನಿನ್ನನ್ನು ಹಿಂಬಾಲಿಸುವೆನು" ಅಂದನು. ಅದಕ್ಕೆ ಎಲೀಯನು ಹೋಗು; ನಾನು ನಿನಗೆ ಮಾಡಿದ್ದೇನು ಎಂದು ಉತ್ತರಕೊಟ್ಟನು.[15] ಎಲೀಷನು ಹಿಂದಿರುಗಿ ಹೋಗಿ ತಾನು ಉಳುತ್ತಿದ್ದ ಜೋಡಿ ಎತ್ತಗಳನ್ನು ತೆಗೆದುಕೊಂಡು ಅವುಗಳನ್ನು ವಧಿಸಿ ಮಾಂಸವನ್ನು ರೆಂಟೆಯ ಕಟ್ಟಿಗೆಯಿಂದ (ಕಟ್ಟಿಗೆಯ ನೊಗ ಮತ್ತು ಚರ್ಮದ ಕುತ್ತಗೆಯ ಪಟ್ಟಿ) ಬೇಯಿಸಿ (ಬಲಿಸಮರ್ಪಣೆಯ ಸಮಯದಲ್ಲಿ ಉಪಯೋಗಿಸದಿರದ ಭಾಗವನ್ನು) ಜನರಿಗೆ ಔತಣ ಮಾಡಿಸಿದನು (ಬೀಳ್ಕೊಡುವ ಸಮಾರಂಭವನ್ನು ಮಾಡಿಕೊಂಡನು) (ವಚನಗಳು 20, 21ಎ).

ಎಲೀಷನು ತನ್ನ ಸೇತುವೆಗಳನ್ನು ಸುಟ್ಟುಹಾಕಿದ್ದನು ಆತನ ಜೀವನ ಭಾಗವು

ಮುಗಿದುಹೋಗಿತ್ತು. "ಆತನು ಅನಂತರ ಎದ್ದು ಎಲೀಯನನ್ನು ಹಿಂಬಾಲಿಸಿದನು" (ವಚನ 21ಬಿ). ಆತನು ಎಲೀಯನ ಅವಶ್ಯಕತೆಗಳನ್ನು ಗಮನಿಸಿದನು. ಎಲೀಷನು "ಎಲೀಯನ ಕೈಯಿಂದ ನೀರನ್ನು ಸುರಿದುಕೊಂಡನು" ಎಂಬುದು ಸೇವಕನ ಕೆಲಸವನ್ನು ನಿರ್ವಹಿಸುವುದನ್ನು ವರ್ಣಿಸವ ಮಾರ್ಗವಾಗಿದೆ (2 ಅರಸು 3:11).

ಎಲೀಯನು ತಿರುಗೊಂದಾವರ್ತಿ ತನ್ನ ಮುಖ್ಯಸ್ಥನ ಚಿತ್ತವನ್ನು ಮಾಡುವುದಕ್ಕೆ ಮುಂದುವರೆದು ಹೆಜ್ಜೆಯನ್ನು ಹಾಕಿದನು.

ದೇವರು ಎಲೀಯನ ಹತಾಶೆಯ ಪ್ರಕರಣವನ್ನು ಹೇಗೆ ನಿವಾರಿಸಿದನು ಎಂಬುದನ್ನು ಸಂಕ್ಷಿಪ್ತವಾಗಿ ನೋಡುಕೊಳ್ಳುವಾ.

ಮೊದಲು ದೇವರು ಎಲೀಯನ ದೈಹಿಕ ಅವಶ್ಯಕತೆಗಳನ್ನು ನೀಗಿಸಿದನು. ಆತನು ಪ್ರವಾದಿಗಳನ್ನು ಕುಡಿಯುವಂತೆ ತಿನ್ನುವಂತೆ ಮತ್ತು ವಿಶ್ರಾಂತಿ ತೆಗೆದುಕೊಳ್ಳುವಂತೆ ಮಾಡಿದನು. ಯಾವಾಗಲೂ, ಒತ್ತಡಕ್ಕೊಳಗಾದ ಕೆಲವರೊಡನೆ ನಾವು ಮಾತನಾಡುವಾಗ, ಅವರು ದೈಹಿಕವಾಗಿ ಮತ್ತು ಭಾವಾನಾತ್ಮಕವಾಗಿ ಬಳಲಿರುತ್ತಾರೆ. ಅವರಿಗೆ ಸ್ವಲ್ಪ ವಿಶ್ರಾಂತಿಯ ಅವಶ್ಯಕತೆಯಿರುತ್ತದೆ; ಅವರಿಗೆ ಮಮತೆಯ, ಪ್ರೀತಿಯ ಕಾಳಜಿಯ ಅವಶ್ಯಕತೆಯು ಇದೆ. ಅನೇಕ ಸಾರಿ ನಾನು ಒಬ್ಬ ಕುಗ್ಗಿದ ವ್ಯಕ್ತಿಯನ್ನು ಕಂಡರೆ ನಾನು ಮಾಡುವುದೆನೆಂದರೆ ಸಂಪೂರ್ಣ ತಪಾಸಣೆಗಾಗಿ ವೈದ್ಯರೆಡೆಗೆ ಕಳುಹಿಸುತ್ತಿದ್ದೆನು ನಮ್ಮ ದೇಹವು ದೇವರ ಆಲಯವಾಗಿದೆ ಎಂಬುದನ್ನು ನಾವು ನೆನಪಿಟ್ಟುಕೊಳ್ಳಬೇಕು (1 ಕೊರಿಂಥ 3:16, 17). ಟ್ರೂತ್ ಫಾರ್ ಟುಡೆ ಯನ್ನು ಬರೆಯಲು ನಾನು ಹೋದಾಗ ನಾನು ನನ್ನ ಬರೆಯುವ ಕೋಣೆಯ ಬಾಗಿಲಿಗೆ ಒಂದು ಕೃತಕ ಹೂವನ್ನು ಹಾಕಿದ್ದೆನು. ಕಾರಣ ಸಮಯದಿಂದ ಸಮಯಕ್ಕೆ ಗುಲಾಬಿಯ ಸುವಾಸನೆಯನ್ನು ಸವಿಯಲು ಸ್ವಲ್ಪ ನಿಲ್ಲಬೇಕೆಂದು ನೆನಿಪಿಸಲು!

ಎರಡನೆಯದಾಗಿ ದೇವರು ಎಲೀಯನೊಂದಿಗೆ ಸೌಮ್ಯವಾಗಿ ವರ್ತಿಸಿದನು ನಾನು ತಿಳಿದಂತೆ ಅನೇಕ ಕ್ರೈಸ್ತ ಸಲಹೆಗಾರರು ಎಲೀಯನ ನಿರಾಶೆಯ ಕಥೆಯನ್ನು ಮೆಚ್ಚುವವರಾಗಿರುತ್ತಾರೆ. "ಪ್ರಶ್ನೆಗಳನ್ನು ಕೇಳು" ಎಂಬುದರಿಂದ ಹಿಡಿದು ತನ್ನ ಬಗೆಗೆ ಮನಸ್ಸಿನ ಓಟವನ್ನು ನಿಲ್ಲಿಸಿ ದೇವರ ಮೇಲೆ ಮನಸ್ಸನ್ನು ಇಡುವವರೆಗಿನ ಆಧುನಿಕ ಸಲಹಗಾರರ ಪದ್ಧತಿಗೆ ಸಂಬಂಧಿಸಿದಂತೆ ಇಪ್ಪತ್ತೈದು ಸಂಗತಿಗಳ ಪಟ್ಟಿಯು ಈ ಕಥೆಯಿಂದ ನಮಗೆ ದೊರೆಯುತ್ತದೆ. ಇವೆಲ್ಲವನ್ನೂ ಒಟ್ಟುಗೂಡಿಸಿದಾಗ ಇದರಿಂದ ನಾವು ದೇವರು ಎಲೀಯನೊಂದಿಗೆ ಮಮತೆಯಿಂದ ವ್ಯವಹರಿಸಿದ್ದನು ಎಂದು ಹೇಳಬಹುದು.

ಈ ಒಂದು ಕಾರಣದಿಂದ ದೇವರು ಈ ಸೇವಕನನ್ನು ಬಿಟ್ಟುಕೊಡಲಿಲ್ಲ. ದೇವರು ಅವನೊಡನೆ ಕೋಪದಿಂದ ಮಾತನಾಡಲೂ ಇಲ್ಲ ಅಥವಾ ಅವನನ್ನು ಕೀಳಾಗಿಯೂ ಕಾಣಲಿಲ್ಲ. ಬದಲಾಗಿ, ಆತನೊಂದಿಗೆ ಉಪಯುಕ್ತ ಕಾರ್ಯಗಳನ್ನು ಮಾಡುವ ಸ್ಥಳಕ್ಕೆ ಆತನನ್ನು ಕಾಳಜೀಪೂರಕವಾಗಿ ನಡಿಸಿದನು. ನಾವು ದೇವರನ್ನು ಪ್ರೀತಿ ಪೂರಕ ದೇವರೆಂದು ಅರಿತುಕೊಳ್ಳಲೇಬೇಕು. ಆತನು ನಮ್ಮ ಪಕ್ಷದಲ್ಲಿದ್ದಾನೆ (ರೋಮಾಪುರ 8:31). ಆತನು ನಮ್ಮನ್ನು ರಕ್ಷಿಸಲು ಬಯಸುತ್ತಾನೆ (2 ಪೇತ್ರ 3:9). ನಾವು ಹೊರಗೆ ಹೊಗಿದ್ದಾಗ, ಆತನು ನಮ್ಮನ್ನು ತಿರುಗಿ ಬರಮಾಡುವಂತೆ ಇದೆಲ್ಲವನ್ನೂ ಮಮತೆಯಿಂದ ಮಾಡುತ್ತಾನೆ (ಕೀರ್ತನೆ 23:3, 5; ಲೂಕ 15:4-6). ಒಂದು ವೇಳೆ ನಾವು ಪಶ್ಚಾತ್ತಾಪ ಪಟ್ಟಿದ್ದಾದರೆ ಆತನು ನಮ್ಮನ್ನು ತನ್ನ ಕೈಗಳಲ್ಲಿ ಎತ್ತಿ ತರುವನು (ಲೂಕ 15:20 ಹೋಲಿಸಿ).

*ನಾವು* ನಿರಾಶೆಹೊಂದಿದವರೊಂದಿಗೆ ವ್ಯವಹರಿಸುವಾಗ, ಅದು ಕರುಣಾ ಪೂರಕವೂ ಮತ್ತು ಮೃದುತ್ವದ್ದಾಗಿರಲಿ.

ಆತನು ಎಲೀಯನಿಗೆ ಕೆಲಸವನ್ನು ಕೊಟ್ಟನು. "ಪ್ರೀತಿಯಲ್ಲಿ ಸತ್ಯತೆ" ಎಂಬ ದೂರದರ್ಶನದ ಕಾರ್ಯಕ್ರಮದ ಅತಿಥೇಯನು ನಾನಾಗಿದ್ದಾಗ ವಿಶೇಷ ಲೇಖನದ

ಒಂದು ಕಾರ್ಯಕ್ರಮದ ಬಗೆಗೆ ಓಕ್ಲಾಹಾಮಾ ಕ್ರಿಶ್ಚಿಯನ್‌ದ ಅಧ್ಯಾಪಕರಾದ ಡಾ. ವಿಲಿಯಮ್ಸ್ ಜೋನ್ಸ್‌ರವರು "ಸಂಶಯದ ಜೊತೆ ಹೇಗೆ ವ್ಯವಹರಿಸಬೇಕು" ಎಂಬುದರ ಬಗಗೆ ಮಾತನಾಡುತ್ತಿದ್ದರು. ಅವರು ಕೆಲ ಪ್ರಾಯೋಗಿಕ ಸಲಹೆಗಳ ಸರಣಿಯನ್ನು ಕೊಟ್ಟರು. "ಹೋಗು ಸೇವೆ ಮಾಡು" ಎನ್ನುವದು ಬಲು ಮಹತ್ವವಾದ ಸಲಹೆಯಾಗಿದ್ದು ಅದು ಅನೇಕ ವ್ಯಕ್ತಿಗಳಿಗೆ ಅವಶ್ಯವಾಗಿರುತ್ತದೆ, ನಿಮ್ಮಷ್ಟಕ್ಕೆ ನೀವೇ ಎದ್ದೇಳಿ. ನಿಮ್ಮ ಬಗೆಗೆ ವಿಚಾರಮಾಡುವುದನ್ನು ನಿಲ್ಲಿಸಿ. ಇತರ ಬಗೆಗೆ ಯೋಚಿಸಿರಿ; ಇತರರಿಗೆ ಸಹಾಯಿಸಲು ಪ್ರಯತ್ನಿಸಿರಿ ಎಂದು ಅವರು ಗಮನಿಸಿದ್ದಾರೆ.

ದೇವರು ಎಲೀಯನಿಗೆ ಆತನ ಜೀವಿತವು ಇನ್ನೂ ಮುಗಿದಿಲ್ಲ ಎಂದು ಹೇಳುತ್ತಿದ್ದಾನೆ: "ನಿನಗೆ ಮಾಡಲು ಇನ್ನೂ ಅರ್ಥಪೂರ್ಣವಾದ ಕಾರ್ಯಗಳಿವೆ. ಇದು ಅದೇ ತರದ ಕೆಲಸವಲ್ಲ. (ನಮ್ಮ ಕೆಲಸವು ಸಮಯವು ಕಳೆದಂತೆ ಬದಲಾಗುತ್ತಾ ಹೋಗುತ್ತದೆ. ನಮ್ಮ ಸಮರ್ಥವು ಬದಲಾಗುತ್ತದೆ) ಇದು ನಮ್ಮ ಕೆಲಸವನ್ನು ಸುಧಾರಿಸುವುದಾಗಿದೆ. ಕರ್ಮೆಲ ಬೆಟ್ಟದಲ್ಲಿ ಇನ್ನೊಂದು ಪ್ರದರ್ಶನವು ಇರದಿರದು, ಆದರೆ ನಾಟಕೀಯ ಕ್ಷಣಗಳು ಇನ್ನೂ ಇರುತ್ತವೆ. ನೀನು ಇನ್ನೂ ಆಹಾಬನ ಮನಸ್ಸಾಕ್ಷಿಯಂತೆ ಕೆಲಸ ಮಾಡುವುದಾದರೆ ಅಲ್ಲಿ ಇನ್ನೂ ಹೆಚ್ಚಿನ ಬೆಂಕಿಯು ಆಕಾಶದಿಂದ ಬರಬಹುದು." ನಾವು ನೋಡುವಂತೆ, ಪ್ರವಾದಿ ಗಳನ್ನು ತರಬೇತುಗೊಳಿಸುವ ಮಹತ್ವದ ಕಾರ್ಯದಲ್ಲಿ ಎಲೀಯನು ತೊಡಗುವಂತೆ ದೇವರು ಎಲೀಯನಿಗಾಗಿ ಒಂದು ಯೋಜನೆಯನ್ನು ಹಾಕಿದ್ದಾನೆ. ಇದಕ್ಕನುಗುಣವಾಗಿ ದೇವರು, "ನಾನು ನಿನ್ನನ್ನು ಚಾಚು ಹಲಿಗೆಯ ಮೇಲೆ ಮಲಗಲು ಬಿಡೆನು, ಯಾಕೆಂದರೆ ಅದು ಬಿದ್ದು ಹೋಗುತ್ತದೆ. ನೀನು ನನ್ನ ಮೌಲ್ಯವುಳ್ಳ ಸೇವಕನಾಗಿದ್ದೀ" ಎನ್ನುತ್ತಾನೆ!

ಒಂದು ವೇಳೆ ನೀನು ನಿನ್ನನ್ನು ಅಸಹ್ಯವಾದ ಜಾಗದಲ್ಲಿ ಕಂಡುಕೊಂಡಿದ್ದಾದರೆ, ಬಹುಶಃ ವಿಶಿಷ್ಟವಾದದ್ದು ಏನನ್ನಾದರೂ ಮಾಡುವುದನ್ನು ವಿಶೇಷವಾಗಿ ಇತರರ ಜೀವವನ್ನು ಆಶೀರ್ವದಿಸುವಂತದ್ದನ್ನು ಕಾಣಬಹದು. ನೀವು ಇತರರನ್ನು ಅವ ಭಾವನಾತ್ಮಕವಾದ ಸಮಸ್ಯೆಗಳಿಗೆ ಸಹಾಯಿಸಲು ಪ್ರಯತ್ನಿಸಿದ್ದೇ ಆದರೆ, ಅವರ ಜೀವಿತದಲ್ಲಿನ ಉದ್ದೇಶವನ್ನು ಕಂಡುಕೊಳ್ಳಲು ಪ್ರಯತ್ನಿಸು.

ನಾಲ್ಕನೆಯದಾಗಿ, ಎಲೀಯನಿಗೆ ಒಬ್ಬ ಸ್ನೇಹಿತನನ್ನು ಮತ್ತು ಒಬ್ಬ ಸಂಗಾತಿಯನ್ನೂ ಕೊಟ್ಟನು. ಪ್ರತಿಯೊಬ್ಬರಿಗೂ ಯಾರೋಬ್ಬರದಾದರೂ ಅವಶ್ಯಕತೆಯು ಇದ್ದೇ ಇರುತ್ತದೆ. ನಮ್ಮಲ್ಲಿ ಅನೇಕರಿಗೆ ಇದೊಂದು ಪ್ರೀತಿಯ ಕ್ರಿಸ್ತೀಯ ಸಂಗಾತಿ ಇರುತ್ತಾರೆ. ಇತರರಿಗೆ, ಇದು ಹತ್ತಿರವಾದ ಕ್ರಿಸ್ತೀಯ ಸ್ನೇಹಿತ. ನಾವೆಲ್ಲರೂ ಯೇಸುವನ್ನು ಸ್ನೇಹಿತನನ್ನಾಗಿ ಹೊಂದಿದ್ದೇವೆ. ನಮಗೆ ಇನ್ನೊಬ್ಬರ ಅವಶ್ಯಕತೆಯು ಇದೆ. ದೇವರು ಎಲೀಯನಿಗೆ ಎಲೀಷನನ್ನು ಕೊಟ್ಟನು.

ಕೆಲವರು "ನಾನು ಚರ್ಚಿನ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಲು ಬಯಸಿದೆನು. ಅಲ್ಲಿ ಅನೇಕ ಒಳಸಂಚಿನ ಗುಂಪುಗಳು ಇವೆ. ನಾನು ಅಲ್ಲಿನ ಯಾವುದೇ ಗುಂಪಿನಲ್ಲಿ ಸೇರಲು ಬಯಸುವುದಿಲ್ಲ" ಎಂದು ಹೇಳಬಹುದು. ಒಂದು ವೇಳೆ ಅದು ಹಾಗೇ ಇದ್ದರೆ ಇರುವುದಾದರೆ ನೀನು ಎಲ್ಲಿ ಆರಾಧನೆಯನ್ನು ಮಾಡುತ್ತಿ, ನನಗೆ ಖೇಧವೆನ್ನಿಸುತ್ತದೆ; ಆದರೆ ನೀನು ಯಾವ ಗುಂಪಿನಲ್ಲಾದರೂ ಹೊಂದಿಕೋ. ಜಾಲಿಗಿಡದ ಕೆಳಗೆ ಯಾರನ್ನಾದರೂ ಹುಡುಕಿಕೋ. ನಿನಗಿಂತ ಏಕಾಂಗಿಯಾಗಿರುವ ಯಾರನ್ನಾದರೂ ಹುಡುಕು. ಅವನಿಗೆ ಸ್ನೇಹಿತನಾಗಿರು. ನೀನು ನಿನ್ನ ಮಾರ್ಗದಲ್ಲಿ ಒಂದು ಆಧಾರಸ್ತಂಭವನ್ನು ಕಟ್ಟುತ್ತಿದ್ದಿ. ಅದು ನಿನ್ನ ಹೊಸ ಮಿತ್ರನಿಗೂ ಮತ್ತು ನಿನಗೂ ಆಶೀರ್ವಾದ ತರುವಂತದ್ದಾಗಿದೆ.

## ಮುಕ್ತಾಯ

ಇದು ಕರ್ಮೆಲ್ ಬೆಟ್ಟ ಅಲ್ಲ, ವಿಜಯೋತ್ಸವದ ಬೆಟ್ಟ ನಾವು ಯಾವುದರಿಂದ ರಚಿತ ವಾಗಿದ್ದೇವೆ ಎಂದು ನಾವು ಕಂಡುಕೊಂಡಿದ್ದೇವೆ, ಆದರೆ ಸಂಗತಿಗಳು ಹೇಗಿರ ಬೇಕೆಂದು

ನಾವು ಯೋಚಿಸುತ್ತಿರುವಂತೆ ಸಂಗತಿಗಳು ತಿರುಗಿಕೊಳ್ಳದಿದ್ದಾಗ, ನಾವು ನಿರೀಕ್ಷಿಸಿದಂತೆ ಸಂಗತಿಗಳು ಇರದೇ ಇದ್ದಾಗ ಅದು ಏಕಾಂತತೆಯ ಬೆಟ್ಟವಾದ ಸಿನಾಯಿ ಬೆಟ್ಟವಾಗುತ್ತದೆ.

ನಾವು ನಮ್ಮನ್ನು ಅಲ್ಲಿ ಕಂಡು ಕೊಂಡಿದ್ದಾದರೆ, ಕರ್ತನೊಡನೆ ನಮ್ಮ ಸಂಬಂಧವನ್ನು ಪರೀಕ್ಷಿಸಿಕೊಳ್ಳುವದು ಅವಶ್ಯವಿದೆ. ಎಲೀಯನಂತಿದ್ದು ನಾವು ಬಯಸಿದ ದಿಕ್ಕಿನಲ್ಲಿ "ಯೆಹೋವನ ವಾಕ್ಯಕ್ಕೆ" ಕಾಯದೆ ಹೋಗುವವರಾಗಿದ್ದು, ನಾವು ಓಟವನ್ನು ನಿಲ್ಲಿಸುವವ ರಾಗಿದ್ದೇವೆ. ನಮಗೆ ಆ ವಾಕ್ಯವು ಯಾವದು ಎಂದು ಬೈಬಲಿನಲ್ಲಿ ಹುಡುಕಬೇಕಾದ ಮತ್ತು ಆತನೆಡೆಗೆ ಹಿಂತಿರುಗುವ ಅವಶ್ಯಕತೆಯು ಬಹುಶಃ ನಮಗೆ ಇದೆ.

ಇಂದು ನೀನು ಎಲ್ಲಿ ಇದ್ದಿ? ನಿನ್ನನ್ನು ನೀನು ಸ್ವಾನುಕಂಪ ಎಂಬ ಗವಿಯಲ್ಲಿ ಕಂಡುಕೊಂಡಿದ್ದೀಯಾ, ಕರ್ತನೆಡೆಗೆ ತಿರುಗಿಕೋ, ಆತನಲ್ಲಿ ವಿಶ್ವಾಸವಿಡು! ಆ ಗವಿಯಿಂದ ಹೊರಗೆ ಬಾ! ಸಿನಾಯಿಬೆಟ್ಟವನ್ನು ಬಿಡಿರಿ ಮತ್ತು ಕಾಲ್ವರಿ ಬೆಟ್ಟಕ್ಕೆ ಬನ್ನಿರಿ.

---

ಟಿಪ್ಪಣಿಗಳು

[1]"ಆತನು ಬಯಪಟ್ಟನು" ಇದೇ ರೀತಿಯ ಇಬ್ರಿಯ ಅಕ್ಷರಮಾಲೆಯ ಪದವು "ಆತನು ನೋಡಿ ದನು" ಎಂಬಂತಿದೆ (ನೋಡಿ KJV ಮತ್ತು ಇತರ ಕೆಲ ಭಾಗಗಳೂ); ಕೇವಲ ಸ್ವರಗಳು ಬದಲಾಗಿವೆ. "ಆತನು ಭಯಪಟ್ಟನು" ಎಂಬಂತಹ ಅನೇಕ ಹೊಸ ಭಾಷಾಂತರಗಳು ಸ್ಪಟುಗೆಂಟ ಭಾಷಾಂತರಗಳಿಂದ ಸಂಕೇತಗಳನ್ನು ತೆಗೆದುಕೊಳ್ಳುತ್ತಾರೆ. [2]ಹಿಂದಿನ ಟಿಪ್ಪಣಿಗಳನ್ನು ನೋಡಿರಿ. [3]ಆತನನ್ನು ಬಿಟ್ಟುಬಿಡುವ ಮೂಲಕ ತಾನೂ ಇನ್ನೂ ಬೇಗನೇ ಪ್ರಯಾಣಮಾಡಬಹುದೆಂದು ಆತನು ಯೋಚಿಸಿರಬಹುದು: ಆತನನ್ನು ಬಿಟ್ಟಿದ್ದು ಸೇವಕನ ಸ್ವಂತದ ರಕ್ಷಣೆಗಾಗಿಯೂ ಇರಬಹುದು. ದೇವರು ಸ್ವಂತ ತಾನೇ ಇದನ್ನು ಯಾಕೆ ಎಂದು ಹೇಳದಿದ್ದಾಗೆ ಊಹೆ ಮಾಡುವದು ವ್ಯರ್ಥ. [4]ಇದು ಐಚ್ಛಿಕವಾದದ್ದು: ಇಲ್ಲಿ ಕರವಸ್ತ್ರವನ್ನು ಉಪಯೋಗಿಸಿರಿ. ದೃಕ್ ಶ್ರವಣ ಟಿಪ್ಪಣಿಯನ್ನು ನೋಡಿರಿ. [5]ಇಲ್ಲಿ ಎಲೀಯನ ಪ್ರಾರ್ಥನೆಯನ್ನೂ ಆತನು ಕರ್ಮೆಲ್ ಬೆಟ್ಟದ ಮೇಲೆ ಮಾಡಿದ ಪ್ರಾರ್ಥನೆಯ ಜೊತೆ ಈ ಸಂದರ್ಭದಲ್ಲಿ ಹೋಲಿಸಿರಿ: 1 ಅರಸು 18:36, 37. [6]ಮತ್ತಾಯ 10:28. [7]ಐಚ್ಛಿಕವಾದುದ್ದು: ನಿನ್ನ ಎದೆಯ ಮೇಲೆ ಬಡಿದುಕೋ, ಹೃದಯದ ಬಡಿದ ಹಾಗೆ ಇದನ್ನು ಮೈಕ್ರೊಫೋನಿಗೆ ಸಮೀಪದಲ್ಲಿ ಮಾಡು. [8]ಇಬ್ರಿಯ ಪದದ ಇದರ ಅರ್ಥವು "ಕಲ್ಲು" ಅಥವಾ "ಇದ್ದಿಲು" ಎಂದಾಗಿರಬಹುದು (KJV ಮತ್ತು ಇತರ ಭಾಷಾಂತರಗಳನ್ನು ನೋಡಿರಿ). ಜಾಲಿಗಿಡದ ಬೇರುಗಳು/ಹುಲ್ಲಿನ ಗಿಡಗಳಿಂದ ಇದ್ದಿಲನ್ನು ಮಾಡುವರು. [9]ಇದು ಬೆರ್ಷಬದಿಂದ ಸಾಂಪ್ರದಾಯಿಕ ಬೆಟ್ಟವಾದ ಸಿನಾಯಿ ಬೆಟ್ಟವು ಸುಮಾರು ಕೇವಲ 150 ಮೈಲಿ ದೂರವಿದೆ. ಬಹುಶ ಸಮಗ್ರ ಸಿನಾಯಿ ಪ್ರಕರಣದಲ್ಲಿ ನಾಲ್ವತ್ತು ದಿನಗಳ ಪ್ರಯಾಣವನ್ನು ತೆಗೆದುಕೊಳ್ಳುವಂತದರಲ್ಲಿ (ಅಲ್ಲಿ ಪ್ರಯಾಣವಿತ್ತು, ಸಮಯವನ್ನು ಕಳೆದರು, ಪ್ರಯಾಣದಿಂದ ಹಿಂದಿರುಗಿದರು) ಅವರು ನಾಲ್ವತ್ತು ದಿನಗಳನ್ನು ತೆಗೆದುಕೊಂಡರು. ಸಿನಾಯಿ ಬೆಟ್ಟದ ಇನ್ನೊಂದು ಸಾಧ್ಯತೆಯೆಂದರೆ ಇದೊಂದು ವಿಭಿನ್ನವಾದ ಸ್ಥಳದಲ್ಲಿದೆ; 1 ಅರಸು ಬರ್ಟನ್ ಕಾಫ್‌ಮನ್‌ರ ವಿಮರ್ಶೆಯನ್ನು ನೋಡಿರಿ. [10]ಮೂಲವಾದ ಭಾಗದಲ್ಲಿ "ಗವಿ" ಎಂದಿದೆ, ಬೆಟ್ಟದಲ್ಲಿನ ಈ ಸ್ಥಳವು ಮೋಶೆಯು ದೇವರನ್ನು ನೋಡಿದ ಸ್ಥಳವಾಗಿರಬಹುದು ಎಂದು ಮತ್ತು ಎಲೀಯನು ಉದ್ದೇಶಪೂರ್ವಕವಾಗಿಯೇ ಈ ಪವಿತ್ರ ಸ್ಥಳದಲ್ಲಿ ಅಡಗಿದನು ಎಂದು ತಾವು ನಂಬುವುದಕ್ಕೆ ಕಾರಣಗಳನ್ನು ಕೊಡುತ್ತಾರೆ. ಏನೇ ಆಗಲಿ ಇದೊಂದು ಬಿರುಕು ಆಗಿದ್ದು, ಎಲೀಯನು ವಾಸಿಸಿರಬಹುದಾದ ಗವಿ ಇದಾಗಿತ್ತು.

[11]ಐಚ್ಛಿಕವಾಗಿ: ಇಲ್ಲಿ ತಿರುಗಿ ಕರವಸ್ತ್ರವನ್ನು ಉಪಯೋಗಿಸಿ. ದೃಶವಣದ ಟಿಪ್ಪಣಿಗಳನ್ನು ನೋಡಿರಿ. [12]"ಅಭಿಷೇಕಿಸು" ಇದು ವಚನ 15 ಮತ್ತು 16 ರಲ್ಲಿ ಸಂಕೇತಾರ್ಥವಾಗಿ ಉಪಯೋಗಿಸಲ್ಪಟ್ಟಿದೆ. ಇವುಗಳಲ್ಲಿ ಯಾರ ಮೇಲೆ ಮತ್ತು ಎಲೀಷನ ಮೇಲೆಯೂ ಎಲೀಯನು ಅಕ್ಷರ ಸಹ ಎಣ್ಣೆಯನ್ನು ಸುರಿದನೆಂಬುದಕ್ಕೆ ಎಂದಿಗೂ ಯಾವ ಸೂಚನೆಯೂ ಅಲಿಲ್ಲ. ಎಲೀಯನು ತನ್ನನ್ನು ತಾನು ದೇವರ ಉದ್ದೇಶದಿಂದ ತೆಗೆದುಕೊಂಡು, ಅಲ್ಲಿ ದೇವರ ಪ್ರತಿನಿಧಿಯಾಗಿ ಕೆಲಸ ಮಾಡಿದನು ಎಂಬುದನ್ನು ಒತ್ತಿ ಹೇಳುತ್ತದೆ. [13]ಎಫೆಸ 6:17; ಇಬ್ರಿಯ 3:12. ಎಲೀಷನು ದೇವರಿಗೆ ವಿರುದ್ಧರಾಗಿರುವವರ ಮೇಲೆ ಬರುವ ನ್ಯಾಯ ತೀರ್ಪನ್ನು ಅನೀತಿವಂತರಿಗೆ ದೇವರ ವಾಕ್ಯದ ಮೂಲಕ "ಮರಣಕ್ಕೆ" ಒಪ್ಪಿಸಿದನು. [14]ಇದು ಎಲೀಷನ ಕುಟುಂಬವು ಇಪ್ಪಾತ್ತನಾಲ್ಕು ಎತ್ತುಗಳನ್ನು ಸ್ವಂತಕ್ಕೆ ಹೋಂದುವಷ್ಟು ಶ್ರೀಮಂತ ರಾಗಿರಬಹುದು

ಬಹುಶ ಇರಲಿಕ್ಕಿಲ್ಲ ಎಂದು ಸಿದ್ಧಪಡಿಸುತ್ತದೆ. ಬಹುಶ ಆ ಪ್ರದೇಶದ ರೈತರು ಜೊತೆಗೂಡಿ ಕೆಲಸವನ್ನು ಮಾಡುವುದನ್ನು ಬಯಸುತ್ತಿರಬಹುದು, ಮೊದಲು ಒಬ್ಬನ ಹೊಲ ನಂತರ ಇನ್ನೊಬ್ಬನದು. [15]ಇದು ಬಹುಶಃ ಅಣಕವಲ್ಲ. ಎಲೀಷನ ಮಾತುಗಳು ಲೂಕ 9:57-62ರಲ್ಲಿ ಶಿಷ್ಯರಿಂದ ಕೊಡಲ್ಪಟ್ಟ ನೆವಗಳಂತೆ ಇದೆ ಎಂದು ಸೂಚಿಸುವುದಾಗಿದೆ. ಈ ವ್ಯಕ್ತಿಗಳು ಕ್ರಮೇಣವಾಗಿ ಅನಿರ್ದಿಷ್ಟ ಕಾಲದವರೆಗೂ ಯೇಸುವನ್ನು ಹಿಂಬಾಲಿಸುವುದನ್ನು ನಿಲ್ಲಿಸಿಬಿಟ್ಟಿರುತ್ತಾರೆ. ಎಲೀಷನು ತನ್ನ ತಂದೆ ತಾಯಿಗಳಿಗೆ ಮುದ್ದಿಟ್ಟು ಬರುವದಕ್ಕಿಂತ ಹೆಚ್ಚಿನದೇನನ್ನೂ ಮಾಡಬಯಸಿದನು ಎಂಬುದರ ಬಗೆಗೆ ಯಾವ ಸೂಚನೆಯೂ ಇಲ್ಲ. ಮುಂದೆ ಬರುವ ವಾಕ್ಯಗಳು ಎಲೀಯನು ಹೇಳಿರುವುದನ್ನು ಸೂಚಿಸುವುದಾಗಿದೆ. "ಮುಂದೆ ಹೋಗು, ನೀನು ಹೋಗಿಬರುವುದಾಗಿ ತಂದೆ ತಾಯಿಗಳಿಗೆ ಹೇಳು. ಇದೆಲ್ಲವನ್ನೂ ನಾನು ನಿನಗೆ ಕೆಲಸವೊಂದನ್ನು ಕೊಡಲು ಮಾಡಿರುವೆ, ನಾನೆಂದಿಗೂ ನಿನ್ನ ಕುಟುಂಬದೊಂದಿಗೆ ಎಲ್ಲಾ ಸಂಬಂಧಗಳನ್ನು ಕಡಿದು ಹಾಕು ಎಂದು ಹೇಳಿಲ್ಲ."

---

## ಪಾಠದ ರೂಪರೇಷೆಗಳು

**ಪೀಠಿಕೆ**

A. ಮಳೆಗಾಗಿ ಮಾಡಿದ ಪ್ರಾರ್ಥನೆಯು ಉತ್ತರಿಲ್ಪಟ್ಟಾಗ ಎಲೀಯನು ಅವೇಶವುಳ್ಳವನಾದನು. ಅಧ್ಯಾಯ 19ರಲ್ಲಿ ಎಂಥ ಗಮನಾರ್ಹವಾದ ವ್ಯತ್ಯಾಸವನ್ನು ನಾವು ಕಾಣುತ್ತೇವೆ.
   1. ಎಲೀಯನು ನಮ್ಮಂತ ಸ್ವಭಾವದ ಮನುಷ್ಯನಾಗಿದ್ದನು (ಯಾಕೋಬ 5:17; ಯಾಕೋಬನು ಬಹುಶಃ 1 ಅರಸು 19ರ ಬಗೆಗೆ ಯೋಚಿಸುತ್ತಿರಬಹುದು).
   2. ನಾವು ಮಾಡುವ ಹಾಗೆಯೇ ಎಲೀಯನು ನಿರಾಶೆಗೊಳಗಾದನು. ಅಷ್ಟೆ ಅಲ್ಲದೆ ಇದೆಲ್ಲವನ್ನು ಮಾಡಿದಂತಹ ಈತನೊಬ್ಬನೇ ದೇವರ ಮನುಷ್ಯನಾಗಿರಲಿಲ್ಲ:
      a. ಮೋಶೆ (ಅರಣ್ಯ 11)
      b. ಯೋನ (ಯೋನ 4)
      c. ಪೌಲ (2 ಕೊರಿಂಥ 1)

B. ಈಗ ಎಲೀಯನ ಸಮಸ್ಯೆಯನ್ನು ನೋಡುವಾ, ಆತನು ಆ ಮಾರ್ಗವನ್ನು ಹೇಗೆ ಪಡೆದನು, ಮತ್ತು ದೇವರು ಆ ಸಮಸ್ಯೆಯನ್ನು ಹೇಗೆ ಲಕ್ಷಿಕರಿಸಿದನು (1 ಅರಸು 19).[1]

I. ಹತಾಶೆಯ ಪ್ರಕರಣ (19:1-4)

A. ಎಲೀಯನು ರಾಷ್ಟ್ರಕ್ಕಾಗಿ ದೊಡ್ಡ ನಿರೀಕ್ಷೆಯಿಂದ ಪಟ್ಟಣದ ಬಾಗಿಲನನ್ನು ಪ್ರವೇಶಿಸಿದನು.
   1. ಎಲೀಯನು ಯಾವುದಕ್ಕೋಸ್ಕರ ನಿರೀಕ್ಷಿಸುತ್ತಿದ್ದನೋ ಅದು ಹಾದು ಹೋಗಿರಲಿಲ್ಲ (ವಚನ 1) ಇಜೆಬೇಬಳು ಕೋಪೋದ್ರೇಕಿತಳಾಗಿದ್ದಳು.
   2. ಇಜೆಬೇಲಳು ಹಂತಕನನ್ನು ಕಳುಹಿಸುವ ಬದಲು ದೂತನನ್ನು ಏಕೆ ಕಳುಹಿಸಿದಳು (ವಚನ 2)? ಬಹುಶಃ ಆಕೆಯು ಎಲೀಯನಿಗೆ ದ್ವಂದ್ವ ಯುದ್ಧದ ಸವಾಲು ಎಸಗಲು.
   3. 450 ಜನ ಬಾಳನ ಪ್ರವಾದಿಗಳನ್ನು ನಿಲ್ಲಿಸಿದ ಮನುಷ್ಯನು ರಾಣಿಯಿಂದ ಓಡಿ ಹೋದನು (ವಚನ 3).
   4. ಆತನು ಜಾಲಿಮರದ ಬಳಿಯಲ್ಲಿ ನಿಂತನು (ವಚನ 4). ನಮಗೆ ಇಲ್ಲಿ ನಿರಾಶೆಗೆ ಅತ್ಯುತ್ತಮವಾದ ಪದಗಳಿವೆ!

B. ಎಲೀಯನು ಜಾಲಿಗಿಡದ ಪ್ರಕರಣವನ್ನು ಹೇಗೆ ಕೊನೆಗೊಳಿಸಿದನು?

1. ಆತನು ಮಾನುಷ್ಯ ತಾರ್ಕಿಕ ಕಾರಣದಿಂದ ಮಾರ್ಗದರ್ಶಿಸಲ್ಪಟ್ಟಿದ್ದನೇ, ಹೊರತಾಗಿ ದಿವ್ಯ ಪ್ರಕಟಣೆಯಿಂದಲ್ಲ. ಈ ಸಮಯದಲ್ಲಿ ಆತನು "ಯೆಹೋವನ ವಾಕ್ಯಕ್ಕಾಗಿ" ಕಾಯಲಿಲ್ಲ.
2. ಆತನ ಯೋಚನಾ ಗತಿಯು ದೋಷಯುತವಾಗಿತ್ತು.
3. ಆತನು ಭಯದಡಿಯಲ್ಲಿದ್ದನು. ನಾವು ಭಯದಡಿಯಲ್ಲಿದ್ದಾಗ ನಾವು ಅಣಬೆಗಳಾಗುತ್ತೇವೆ.
4. ವಿಜಯದ ನಂತರದಲ್ಲಿ ಬರಬಹುದಾದ ಆಶಾಭಂಗಕ್ಕೆ ಆತನು ಸಿದ್ಧನಾಗಿರಲಿಲ್ಲ. ವಿಜಯವು ನಮ್ಮನ್ನು ನಿರ್ಬಲರನ್ನಾಗಿಸುತ್ತದೆ.
5. ಆತನ ಬಲದ ಮೂಲಗಳಿಂದ ತನ್ನನ್ನು ಕಡಿದುಕೊಂಡನು.
   a. ಆತನು ದೇವರ ವಾಕ್ಯಕ್ಕಾಗಿ ಕಾಯಲಿಲ್ಲ.
   b. ಆತನ ಸೇವಕನನ್ನು ಅಲ್ಲಿಯೇ ಬಿಟ್ಟು ಬಿಟ್ಟನು.
6. ಆತನು ತಾನೇ ಹೆಚ್ಚು ಬಳಲಿದನು. (ನಾವು ಹೆಚ್ಚು ದಣಿದಾಗ ಎಂದಿಗೂ ಮಹತ್ವದ ನಿರ್ಧಾರಗಳನ್ನು ತೆಗೆದುಕೊಳ್ಳಬಾರದು)
7. ಆತನು ಸ್ವಾನುಕಂಪಕ್ಕೆ ತನನ್ನ ತಾನು ಒಪ್ಪಿಸಿಕೊಟ್ಟನು. ಸ್ವಾನುಕಂಪವು ಸುಳ್ಳನ್ನು ಹೇಳುತ್ತದೆ, ನಂತರ ಅದನ್ನು ದೊಡ್ಡದಾಗಿ ಮಾಡುತ್ತದೆ, ನಾವು ಅದನ್ನು ನಂಬುವಂತೆ ಮಾಡುತ್ತದೆ. ಸ್ವಾನುಕಂಪವು ನಮ್ಮನ್ನು ಆತ್ಮಹತ್ಯೆಯ ವಿಷಯವದವರೆಗೂ ತರುತ್ತದೆ.

II. ದೇವರು ಹತಾಷೆಯ ಪ್ರಕರಣವನ್ನು ಹೇಗೆ ಬಗೆಹರಿಸಿದನು (19:5-21)

A. ದೇವರು ಎಲೀಯನು ದೈಹಿಕ ಅಗತ್ಯತೆಗಳಾದ ಆಹಾರ ಮತ್ತು ನೀರನ್ನು ಇವಗಳತ್ತ ಗಮನಹರಿಸಿದನು (ವಚನಗಳು 5-8).

B. ದೇವರು ಎಲೀಯನ ಜೊತೆ ಮಮತೆಯಿಂದ ವ್ಯವಹರಿಸಿದನು ಇದರಲಿಂದ ಎಲೀಯನು ಸಮಸ್ಯೆಗಳಿಂದ ತನ್ನತ್ತ ತಿರುಗುವಂತೆ ಮಾಡಿದನು (ವಚನಗಳು 9:14).

1. ಎಲೀಯನು ಹೊರಬರುವಂತೆ ದೇವರು ಆತನನ್ನು ಪ್ರಶ್ನಿಸಿದನು.
2. ನಂತರ ಎಲೀಯನು ಗವಿಯಿಂದ ಹೊರಗಬರಲು ಸದ್ದುಗಳನ್ನು ಮಾಡಿದನು.

C. ದೇವರು ಎಲೀಯನಿಗೆ ಅರ್ಥಪೂರ್ಣವಾದ ಕೆಲಸಗಳನ್ನು ಕೊಟ್ಟನು (ವಚನಗಳು 15:18).

1. ಈ ಹಿಂದೆ ಎಲೀಯನು ಹೇಳಿದ ಎಲ್ಲವುಗಳಿಗೆ ದೇವರು ಉತ್ತರಕೊಟ್ಟಿದ್ದನು ಎಂಬುದನ್ನು ಗಮನಿಸಿರಿ.
   a. ಎಲೀಯನು "ಇಸ್ರಾಯೇಲ್ಯರು ನಿನ್ನ ಒಡಂಬಡಿಕೆಯನ್ನು ಮೀರಿ ದ್ದಾರೆ" ದೇವರು: "ಇಸ್ರಾಯೇಲ್ಯರ ಅರಸನಾದ ಹಜಾಯೇಲನು ಅವರನ್ನು ಶಿಕ್ಷಿಸುವನು."
   b. ಎಲೀಯ "ಆಹಾಬ ಮತ್ತು ಇಜೆಬೇಲರು ನಿನ್ನ ವೇದಿಕೆಗಳನ್ನು ಕೆಡಿಹಾಕಿದ್ದಾರೆ" ದೇವರು: "ಯೇಹುವು ಆಹಾಬನ ವಂಶವನ್ನು ನಾಶಮಾಡುವನು. ಇನ್ನು ಮುಂದೆ ಬಾಳನ ಆರಾಧನಾ ವೇಧಿಕೆಯು ಇರುವುದಿಲ್ಲ."
   c. ಎಲೀಯ: "ಅವರು ನಿನ್ನ ಪ್ರವಾದಿಗಳನ್ನು ಸಂಹರಿಸಿದ್ದಾರೆ"; ದೇವರು "ನಾನು ಅವರ ಬದಲಾಗಿ ಇನ್ನೊಬ್ಬನನ್ನು ಕಳುಹಿಸುವೆನು (ಎಲೀಷ)."

d. ಎಲೀಯ: "ನಾನೊಬ್ಬನೇ ಉಳಿದಿರುವೆ" "ಬಾಳನ ಪೂಜೆಯನ್ನು ಮಾಡದ ಆತನಿಗೆ ಮುದ್ದಿಡದೇ ಇದ್ದ 7,000 ಜನ ಇಸ್ರಾಯೇಲ್ಯರು ಇಲ್ಲಿದ್ದಾರೆ."

2. ದೇವರು ಎಲೀಯನಿಗೆ ಆತನ ಜೀವಿತವು ಇನ್ನೂ ಮುಗಿದಿಲ್ಲ ಎಂದು ಹೇಳಿದನು; ಆತನಿಗೆಮಾಡಲು ಅರ್ಥಪೂರ್ಣವಾದ ಕೆಲಸಗಳಿವೆ.
   a. "ಕರ್ಮೆಲ್ ಬೆಟ್ಟದ ಮೇಲಾದ ಮುಖಾಮುಖಿಯು ಅಲ್ಲಿರಲಿಕ್ಕಿಲ್ಲ, ಆದರೆ ಅಲ್ಲಿ ಇನ್ನೂ ನಾಟಕೀಯ ಕ್ಷಣಗಳು ಇವೆ"
   b. ದೇವರು ಆತನಿಗೆ ಯೌವನಸ್ಥರ ತರಬೇತಿಯನ್ನು ಮಾಡುವ ಮುಖ್ಯವಾದ ಕೆಲಸವನ್ನು ವಹಿಸುವ ಯೋಜನೆಯನ್ನು ಹೊಂದಿದ್ದನು!

D. ದೇವರು ಎಲೀಯನಿಗೆ ಒಬ್ಬ ಸ್ನೇಹಿತನನ್ನು ಮತ್ತು ಸಂಗಾತಿಯನ್ನು ಕೊಟ್ಟನು (ವಚನಗಳು 19-21).
   1. ಎಲೀಯನು ಕತ್ತಲೆಯ ಗವಿಯನ್ನು ಬಿಟ್ಟು ಹೊರಬಂದನು ಮತ್ತು ದೇವರ ಕಾರ್ಯವನ್ನು ಮಾಡಲು ಹೊರಟನು. ಆತನು "ಹಾದಿಯ ಬದಿಯಲ್ಲಿ ಜಿಗಿದನು" ಆದರೆ ಆತನನ್ನು ಸರಿದಾರಿಗೆ ತಂದನು.
   2. ಎಲೀಯನು ಎಲೀಷನನ್ನು ಕಂಡನು. ಎಲೀಯನು ಕಾಡು ಮನುಷ್ಯನಾಗಿದ್ದನು; ಎಲೀಷನು ರೈತನಾಗಿದ್ದನು. ದೇವರು ತನಗೆ ಸಮರ್ಪಿಸಿಕೊಂಡಿರುವ ವೈವಿಧ್ಯ ಮಯ ವಾದ ವ್ಯಕ್ತಿತ್ವಗಳನ್ನೂ ಮತ್ತು ಕೌಶಲ್ಯಗಳನ್ನೂ ಉಪಯೋಗಿಸುತ್ತಾನೆ.
   3. ಎಲೀಷನು ಎಲೀಯನನ್ನು ಹಿಂಬಾಲಿಸಿದನು "ಅವನೊಡನೆ ಅವನೂ ಕಾರ್ಯವನ್ನು ಮಾಡಿದನು" (ವಚನ 21). ಎಲೀಷನು ಎಲೀಯನ ಅವಶ್ಯಕತೆಗಳನ್ನೆಲ್ಲಾ ನೀಗಿಸುತ್ತಿದ್ದನು. ನಮಗೆಲ್ಲಾ ಸ್ನೇಹಿತರ ಅವಶ್ಯಕತೆಯು ಇದೆ!

**ಮುಕ್ತಾಯ**

A. ಇದು ಕರ್ಮೆಲ್ ಬೆಟ್ಟ ಅಲ್ಲ, ವಿಜಯೋತ್ಸವದ ಬೆಟ್ಟ, ನಾವು ಯಾವುದರಿಂದ ರಚಿತ ವಾಗಿದ್ದೇವೆ ಎಂದು ನಾವು ಕಂಡುಕೊಂಡಿದ್ದೇವೆ, ಆದರೆ ಸಂಗತಿಗಳು ಹೇಗಿ ರಬೇಕೆಂದು ನಾವು ಯೋಚಿಸುತ್ತಿರುವಂತೆ ಸಂಗತಿಗಳು ತಿರುಗಿಕೊಳ್ಳದಿದ್ದಾಗ, ನಾವು ನಿರೀಕ್ಷಿಸಿದಂತೆ ಸಂಗತಿಗಳು ಇರದೇ ಇದ್ದಾಗ ಅದು ಏಕಾಂತತೆಯ ಬೆಟ್ಟವಾದ ಸಿನಾಯಿ ಬೆಟ್ಟವಾಗುತ್ತದೆ.

B. ಇಂದು ನೀನು ಎಲ್ಲಿ ಇದ್ದೀ? ನಿನ್ನನ್ನು ನೀನು ಸ್ವಾನುಕಂಪ ಎಂಬ ಗವಿಯಲ್ಲಿ ಕಂಡುಕೊಂಡಿದ್ದೀಯಾ, ಕರ್ತನೆಡೆಗೆ ತಿರುಗಿಕೋ, ಆತನಲ್ಲಿ ವಿಶ್ವಾಸವಿಡು! ಆ ಗವಿಯಿಂದ ಹೊರಗೆ ಬಾ!

---

ಟಿಪ್ಪಣಿ

[1]ಈ ವಿಚಾರದ ಮೂಲ ಯಾರು ಎಂಬುದು ನನಗೆ ತಿಳಿಯದು. ವರುಷಗಳು ಸ್ಪಂದವು ಒಕ್ಲಹಾಮದ ಕ್ರಿಶ್ಚಿಯನ್ ಪ್ರವಚನಗಳು ಎಂಬುದರಲ್ಲಿ ಪ್ರೆಂಟಿಸ್ ಮೇಡರ್ ಜುನಿಯರ್‌ರವರು ಯೋಜನಾಪೂರ್ವಕ ನೀಡಿದ "ಎಲೀಯನು ನಿರಾಸೆ ಹೊಂದಿದಾಗ" ಎಂಬ ನಾನು ಪ್ರವಚವನ್ನು ಕೇಳಿ ದೆನು. ಆ ಸಮಯದಿಂದ ಅನೇಕ ಪ್ರಸಂಗಿಗಳು ಮತ್ತು ಸಲಹೆಗಾರರು ಈ ಕಥೆಯನ್ನು ನಿರಾಶೆ ಹೊಂದಿದವರ ಮತ್ತು ಒತ್ತಡಕ್ಕೊಳಗಾದವರೊಡನೆ ವ್ಯವಹರಿಸಲು ಮಾದರಿಯಂತೆ ಉಪಯೋಗಿ ಸುತ್ತಾರೆ.